ಬೆಲೆ ರೂ.2.50 WPP No. SK/WPP/UDP/81/2012-2014
D.O.P - 15-12-2013 at Udupi Sorting Office

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.

**Authorised Distributor For :**
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ – 15 ನವಂಬರ್ 2014

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-14 ಸಂಚಿಕೆ-11 ಪುಟಗಳು-8 Registered Under No.KA/SK/UDP/1260/2012-2014 Dated from 01-01-2012 to 31-12-2014.

## ಪಡುಬಿದ್ರಿಯಲ್ಲಿ ಋಕ್‌ಸಂಹಿತಾ ಯಾಗ ಸಂಪನ್ನ

**ಸಮಸ್ತ ಸಮಾಜ ಬಾಂಧವರ ಶ್ರೇಯೋಭಿವೃದ್ಧಿಯ ಉದ್ದೇಶದ ಸಂಕಲ್ಪದೊಂದಿಗೆ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಸಮಾಜದ ಹಿರಿಯರ ಮಾರ್ಗದರ್ಶನದೊಂದಿಗೆ ಪಡುಬಿದ್ರಿಯ ಶ್ರೀ ಬಾಲಗಣಪತಿ–ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.) ಮತ್ತು ಋಕ್‌ಸಂಹಿತಾ ಯಾಗ ಸಮಿತಿ ಇವರ ಆಯೋಜನೆಯಲ್ಲಿ ಶ್ರೀ ಋಕ್ ಸಂಹಿತಾ ಮಹಾಯಾಗವು ದಿ.26–10–2014ರಿಂದ 02–11–2014ರ ವರೆಗೆ ಸಂಪನ್ನಗೊಂಡಿತು.**



### ಧಾರ್ಮಿಕ ಕಾರ್ಯಕ್ರಮಗಳು

ಋಕ್ ಸಂಹಿತಾ ಯಾಗದಲ್ಲಿ ಪ್ರತಿದಿನ ಬ್ರಹ್ಮಶ್ರೀ ವಾಗೀಶ ಶಾಸ್ತ್ರೀಯವರ ನೇತೃತ್ವದಲ್ಲಿ ವಿವಿಧ ವೈದಿಕರಿಂದ ಬೇರೆ ಬೇರೆ ಧಾರ್ಮಿಕ ವಿಧಿಗಳು ನೆರವೇರಿತು. ದಿನಾಂಕ 26–10–2014ರಂದು ಯಾಗ ಪ್ರಾರಂಭದಲ್ಲಿ ನವಗೃಹಹೋಮವೂ ನಂತರ ಪ್ರತಿದಿನ ಕ್ರಮವಾಗಿ ದುರ್ಗಾಹೋಮ, ಸ್ವಯಂವರ ಪಾರ್ವತೀ ಹೋಮ, ರುದ್ರಹೋಮ, ಶತಮೋದಕ ಹೋಮ, ಹೇರಂಭ ಗಣಪತಿ ಹೋಮ, ಸುಬ್ರಹ್ಮಣ್ಯ ಹೋಮ, ಹಾಗೂ ಕೊನೆಯ ದಿನ ಯಾಗ ಪೂರ್ಣಾಹುತಿಯೂ ನೆರವೇರಿತು.

ಅಲ್ಲದೆ ಪ್ರತಿದಿನ ಭಜನೆ, ಲಲಿತಾ ಸಹಸ್ರ ನಾಮ ಪಾರಾಯಣ, ವಿಷ್ಣು ಸಹಸ್ರನಾಮ ಪಠಣವೂ ವಿವಿಧ ಸಂಘಟನೆಗಳಿಂದ ನೆರವೇರಿತು. ಧಾರ್ಮಿಕ ಉಪನ್ಯಾಸದಲ್ಲಿ ಹಿರಣ್ಯ ವೆಂಕಟೇಶ್ ಭಟ್, ಪದ್ಮನಾಭ ಮರಾಠೆ, ವೇ ಬ್ರ ಶ್ರೀ ಪಂಜ ಭಾಸ್ಕರ ಭಟ್, ಡಾ। ಎಂ ಪ್ರಭಾಕರ ಜೋಷಿ, ಎಮ್ ಆರ್ ವಾಸುದೇವ್, ಕೆ ಎಲ್ ಕುಂಡಂತಾಯ, ಮೊದಲಾದ ವಿದ್ವಾಂಸರಿಂದ ಬೇರೆ ಬೇರೆ ದಿನಗಳಲ್ಲಿ ಬೇರೆ ಬೇರೆ ವಿಷಯಗಳ ಕುರಿತು ಉಪನ್ಯಾಸ ನೀಡಿದರು. ಈ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹೆಚ್ಚಿನಸಂಖ್ಯೆಯಲ್ಲಿ ಭಕ್ತ ಬಾಂಧವರು ಪಾಲ್ಗೊಂಡಿದ್ದರು.

### ಸಾಂಸ್ಕೃತಿಕ ಕಾರ್ಯಕ್ರಮ

ಪ್ರತಿದಿನ ಸಂಜೆ 4 ಗಂಟೆಯಿಂದ ಧಾರ್ಮಿಕ ಉಪನ್ಯಾಸದ ನಂತರ ವಿವಿಧ ಸಂಘಟನೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿತು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಉಡುಪಿ, ಕುಂದಾಪುರ, ಮಂಗಳೂರು ಮೊದಲಾದ ಸ್ಥಾನಿಕ ಬ್ರಾಹ್ಮಣ ಸಂಘಗಳ ಕಲಾವಿದರು ಯಕ್ಷಗಾನ, ತಾಳಮದ್ದಳೆ, ಭರತನಾಟ್ಯ, ಜಾನಪದ ನೃತ್ಯ, ಪ್ರಹಸನ, ಸಂಗೀತ, ಗಾನ–ವೈವಿಧ್ಯಗಳ ಮೂಲಕ ನೆರೆದ ಸಮಾಜ ಬಾಂಧವರ ಮನ ಸೂರೆಗೊಂಡರು.

(3ನೇ ಪುಟಕ್ಕೆ...)

## ಮೊದಲ ದಿನ — ವೈದಿಕ ಹಾಗೂ ಸ್ಥಾನಿಕ ಬ್ರಾಹ್ಮಣ ಸಮಾವೇಶ



ಅಕ್ಟೋಬರ್ 26ರಂದು ಪಡುಬಿದ್ರೆಯಲ್ಲಿ ನಡೆದ ಋಕ್ ಸಂಹಿತಾ ಯಾಗದ ಸಂದರ್ಭ ಮಧ್ಯಾಹ್ನ 3.00 ಗಂಟೆಗೆ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.) ಮಂಗಳೂರು ಹಾಗೂ ಋಕ್ ಸಂಹಿತಾ ಯಾಗಸಮಿತಿ ಪಡುಬಿದ್ರೆ, ಇದರ ಆಶ್ರಯದಲ್ಲಿ ವೈದಿಕ ಹಾಗೂ ಸ್ಥಾನಿಕ ಬ್ರಾಹ್ಮಣ ಸಮಾವೇಶವು ಹೆಬ್ಬೂರಿನ ಘನಪುರಿ ಸಂಸ್ಥಾನ ಕೋದಂಡಾಶ್ರಮ ಮಠದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರ ದಿವ್ಯ ಉಪಸ್ಥಿತಿಯಲ್ಲಿ ನೆರವೇರಿತು.

ಸಮಾಜದ ವೈದಿಕರಿಂದ ವೇದಘೋಷ ದೊಂದಿಗೆ ಪ್ರಾರಂಭಗೊಂಡ ಈ ಸಮಾವೇಶದಲ್ಲಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾವ್ ಎಲ್ಲರನ್ನು ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ನಂತರ ಆಹ್ವಾನಿತ ಅತಿಥಿಗಳಾದ ಕೊಲ್ಲಗಾನ

(3ನೇ ಪುಟಕ್ಕೆ...)

## ಕೊನೆಯ ದಿನ — ಸ್ಥಾನಿಕ ಬ್ರಾಹ್ಮಣ ಸಮಾವೇಶ

ದಿನಾಂಕ 02–11–2014ರಂದು ಪಡುಬಿದ್ರೆಯಲ್ಲಿ ನಡೆದ ಋಕ್ ಸಂಹಿತಾ ಯಾಗದ ಪೂರ್ಣಾಹುತಿಯ ದಿನ ಮಧ್ಯಾಹ್ನ 2.30ರಿಂದ ಎಡನೀರು ಮಠಾಧೀಶ ಶ್ರೀ ಶ್ರೀ ಕೇಶವಾನಂದ ಭಾರತಿಯವರ ದಿವ್ಯ ಉಪಸ್ಥಿತಿಯಲ್ಲಿ ಸ್ಥಾನಿಕ ಬ್ರಾಹ್ಮಣ ಸಮಾವೇಶವು ನೆರವೇರಿತು. ವೈದಿಕರಿಂದ ವೇದ ಮಂತ್ರ ಘೋಷಣೆಯೊಂದಿಗೆ ಪ್ರಾರಂಭಗೊಂಡ ಈ ಸಭೆಯಲ್ಲಿ ಮಂಗಳೂರು ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾಯರು ಎಲ್ಲರನ್ನೂ ಸ್ವಾಗತಿಸಿದರು. ನಂತರ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ವಿಮರ್ಶಕರೂ ಇತಿಹಾಸ ತಜ್ಞರೂ ಆದ ಶ್ರೀ ಪುಂಡಿಕ್ಕಾ ಗಣಪತಿ ಭಟ್ ಮಾತನಾಡಿ ಸ್ಥಾನಿಕರ ಬಗ್ಗೆ ಯಾವುದೇ ಕಾಲದಲ್ಲಿಯೂ ಯಾವುದೇ ಅಧ್ಯಯನ ನಡೆದಿಲ್ಲ. ಬೇರೆ ಹಲವಾರು ಸಮಾಜಗಳ ಬಗ್ಗೆ ಲೇಖನಗಳು, ಸಂಶೋಧನೆಗಳು, ಪಿ.ಹೆಚ್‌ಡಿ.ಗಳು, ಗ್ರಂಥ ರಚನೆಯ ಮೂಲಕ ಸ್ಥಾನ ಪಡೆದು ಕೊಂಡರೂ ಸ್ಥಾನಿಕ ಸಮಾಜದಲ್ಲಿ ಒಂದೇ ಒಂದು ಸಂಶೋಧನಾತ್ಮಕ ಲೇಖನಗಳು ಪ್ರಕಟಗೊಂಡಿಲ್ಲ. ಕೇವಲ ಡಾ। ಪಿ. ಗುರುರಾಜ ಭಟ್ಟರ ಲೇಖನದ "ತುಳುನಾಡಿನಲ್ಲಿ ಸ್ಥಾನಿಕರು" ಪುಸಕದಲ್ಲಿ ಮಾತ್ರ ಸ್ಥಾನಿಕರ ಬಗ್ಗೆ ಉಲ್ಲೇಖಗೆಳಿವೆ. ಕೌಟಿಲ್ಯನ ಅರ್ಥಶಾಸ್ತ್ರದ ಪ್ರಕಾರ ಪ್ರಥಮ ಬ್ರಾಹ್ಮಣ ಸಮಾಜವೇ ಸ್ಥಾನಿಕ ಬ್ರಾಹ್ಮಣ ಸಮಾಜ. ಆದ್ದರಿಂದ ಸ್ಥಾನಿಕ ಬ್ರಾಹ್ಮಣರೇ ಮೂಲ ಪುರುಷರು. ಅದರಲ್ಲಿಯೂ ತುಳುನಾಡಿನ ಬ್ರಾಹ್ಮಣ್ಯದ ಮೂಲ ಸ್ಥಾನಿಕ ಬ್ರಾಹ್ಮಣರು ಎಂದು ಹಲವಾರು ದಾಖಿಲೆಗಳ ಮೂಲಕ ವಿಷದಪಡಿಸಿದರು.

ಇದಲ್ಲದೆ ಮೊದಲಿನಿಂದಲೂ ಅತಿ ಹೆಚ್ಚು ಕಷ್ಟ ಕೋಟಲೆಗಳನ್ನು ಎದುರಿಸಿದವರು ಸ್ಥಾನಿಕ ಬ್ರಾಹ್ಮಣರು. ಇಷ್ಟೆಲ್ಲಾ ಕಠಿಣ ಸವಾಲುಗಳನ್ನು ಎದುರಿಸಿಯೂ ಅವನ್ನೆಲ್ಲಾ ಮೀರಿ ಸ್ಥಾನಿಕ ಸಮಾಜವು ಇಂದು ಇಂತಹ ವ್ಯವಸ್ಥಿತ ಸಮಾವೇಶವನ್ನು ನಡೆಸುವಷ್ಟು ತಲೆ ಎತ್ತಿ ನಿಂತದ್ದು ನಮ್ಮ ಸಮುದಾಯದ ಹೆಮ್ಮೆ ಎಂದು ತಿಳಿಸಿದರು.

ಇನ್ನೊಬ್ಬ ಭಾಷಣಕಾರರಾಗಿ ಆಗಮಿಸಿದ್ದ ಕಥೆ– ಕಾದಂಬರಿಕಾರ, ಲೇಖಕ, ಪ್ರಶಸ್ತಿ ವಿಜೇತ ಕವಿ ಡಾ। ನಾ. ಮೊಗಸಾಲೆ ತಾವೆ ಬರೆದು ತಯಾರಿಸಿ ತಂದಿದ್ದ ಭಾಷಣವನ್ನು ವಾಚಿಸುತಾ ಬೌದ್ಧಿಕ ಸಾಮರ್ಥ್ಯ, ದೈಹಿಕ ದೃಢತೆ ಹಾಗೂ ಕಲಾತ್ಮಕ ಚಟುವಟಿಕೆಗಳಲ್ಲಿ ಮೊದಲಿನಿಂದಲೂ ಸ್ಥಾನಿಕರು ಮೊದಲಿಗರು ಎಂದು ಹಲವಾರು ಉದಾಹರಣೆಗಳ ಮೂಲಕ ಉಲ್ಲೇಖಿಸಿದರು. ಪಾದೂರು ಗುರುರಾಜ ಭಟ್ ಮತ್ತು ಮೊಗವೀರ ಸಮಾಜದ ಒಬ್ಬ ಲೇಖಕ ಈ ಸ್ಥಾನಿಕ ಸಮಾಜದ ಬಗ್ಗೆ ಅಭಿನಂದನೀಯವಾದ ಲೇಖನಗಳನ್ನು ಬರೆದಿರುವುದು ಬಿಟ್ಟು ಇಷ್ಟು ತಿಳುವಳಿಕೆಯುಳ್ಳ ಸ್ಥಾನಿಕ ಸಮಾಜದಿಂದ ತಮ್ಮ ಸಮಾಜದ ಬಗ್ಗೆ ಬರೆದ ಲೇಖನಗಳೇ ಇಲ್ಲದಿರುವುದು ವಿಷಾದನೀಯ ಎಂದು ತಿಳಿಸಿದರು.

ಇನ್ನೋರ್ವ ಅತಿಥಿ ಉದಯವಾಣಿ ಮಂಗಳೂರು ಬ್ಯೂರೋದ ಸಂಪಾದಕ ಶ್ರೀ ಮನೋಹರ ಪ್ರಸಾದ್ ಒಂದು–ಎರಡು ಹೊತ್ತಿನ ಊಟಕ್ಕಾಗಿ ಜಾತಿ–ಪಂಕ್ತಿ ಬೇಧದ ಬಗ್ಗೆ ತಕರಾರು ಮಾಡುವುದಿದ್ದರೆ ಅಂತಹ ಊಟವನ್ನೇ ಬಿಟ್ಟು ಬಿಡುವ ಬಗ್ಗೆ ಯೋಚಿಸುವುದು ಒಳಿತು. ಒಂದು ಸಮೀಕ್ಷೆಯ ಅಂಕಿ–ಅಂಶಗಳ ಪ್ರಕಾರ ಅಮೇರಿಕಾ ದೇಶದ ಪ್ರಜೆಗಳಿಗೆ 20% ಐಕ್ಯೂ ಇದ್ದರೆ ಭಾರತದಲ್ಲಿ 40% ಇರುವುದೆಂದೂ; ಆ 40% ದಲ್ಲಿ 60% ಪಾಲು ಸ್ಥಾನಿಕ ಬ್ರಾಹ್ಮಣರದೆಂದೂ ತಿಳಿದು ಬಂದಿದೆ. ಇಷ್ಟು ಬುದ್ಧಿವಂತರಾದ ನಮ್ಮ ಜನ ಹಲವು ಮರೆವು–ಔದಾಸಿನ್ಯ–ಅಶ್ರದ್ಧೆಗಳನ್ನು ಇಂದಿಗೂ ಆಚರಿಸುತ್ತಾರೆ. ಉದಾಹರಣೆಗೆ ದೇವಸ್ಥಾನದಲ್ಲಿ ಭಕ್ತಿ ಮರೆತು ಟಿ.ವಿ ಧಾರಾವಾಹಿ–ಕ್ರಿಕೆಟ್ ಪಂದ್ಯಗಳ ಬಗ್ಗೆ ಚರ್ಚಿಸುವುದು ಮೊದಲಾದುವುಗಳು. ಆದ್ದರಿಂದ ಯಾವುದೇ ಕಾರ್ಯದಲ್ಲಿ ಏಕಾಗ್ರತೆ ಪಡೆದುಕೊಳ್ಳಬೇಕೆಂದು ಕರೆನೀಡಿದರು.

(5ನೇ ಪುಟಕ್ಕೆ...)


ಋಕ್‌ಸಂಹಿತಾ ಯಾಗದ ಫೋಟೋ ಕೃಪೆ :
ಶ್ರೀ ದೇವಾನಂದ್ ಭಟ್, ಶೋಭಾ ಡಿಜಿಟಲ್, ಬೆಳುವಾಯಿ
ಟಿ.ವಿಶ್ವನಾಥ್ ಶಾನುಭಾಗ್ - ಹರಿಕೃಷ್ಣ ಡಿಜಿಟಲ್ ಕುಂಜಿಬೆಟ್ಟು, ಉಡುಪಿ.

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ| ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶಾನುಭಾಗ್, ವಿ.ಪಿ.ನಗರ
ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ. -ಸಂಪಾದಕ ಮಂಡಳಿ

# ಕನ್ನಡ ಕವಿಕಾವ್ಯ ಪರಿಚಯ-೧೧ : ಷಟ್ಪದಿ ಕವಿ ರಾಘವಾಂಕ-2



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

ಕೆರೆಯ ಪದ್ಮರಸನನ್ನು ಭೇಟಿಯಾಗುವುದಕ್ಕೆಂದು ಹೊಯ್ಸಳ ನಗರಕ್ಕೆ ಹೋದ ರಾಘವಾಂಕನು ಅಲ್ಲಿಂದ ಮರಳಿ ಹಂಪೆಗೆ ಬಂದು ಓರಂಗಲ್ಲಿನ ರಾಜನಾದ ರುದ್ರ ಪ್ರತಾಪನ ಸಭೆಯಲ್ಲಿ ಏಕ, ದ್ವಿ, ತ್ರಿ, ಸಂಧಿ ಗ್ರಾಹಿಗಳೆಂಬ ಕುಕವಿಗಳಿದ್ದಾರೆಂದು ಕೇಳಿ ಅಲ್ಲಿಗೆ ಹೋಗಿ ಷಟ್ಪದೀ ರೂಪವಾದ ವೀರೇಶ್ವರ ಚರಿತೆಯೆಂಬ ಗ್ರಂಥವನ್ನು ಬರೆದು ರಾಜನ ಸಭೆಯಲ್ಲಿ ಓದಿ ಕುಕವಿ ಪರವಾದಿಗಳನ್ನು ಜಯಿಸಿ ಹಂಪೆಗೆ ಬಂದು ಹರೀಶ್ವರನ ಆಜ್ಞಾನುಸಾರವಾಗಿ ಬೇಲೂರಿಗೆ ಹೋಗಿ ಅಲ್ಲಿ ಬಯಲಾದನು. ಈತನಿಗಿಂತ ಹಿಂದೆ ಷಟ್ಪದಿಗಳಲ್ಲಿ ಯಾರೂ ಗ್ರಂಥವನ್ನು ಬರೆದಿರಲಿಲ್ಲ. ಈತನೇ ಅವುಗಳನ್ನು ನಿರ್ಮಿಸಿದನು. 'ಚೆನ್ನ ಬಸವ' ಪುರಾಣವೆಂಬ ಗ್ರಂಥದಲ್ಲಿ ಈ ವಿಷಯವು ಸವಿಸ್ತಾರವಾಗಿ ಹೇಳಲ್ಪಟ್ಟಿದೆ. ಇನ್ನು 'ಬೈರವೇಶ್ವರ ಕಥಾಸೂತ್ರ' ರತ್ನಾಕರದಲ್ಲಿ-'ಪ್ರತಾಪರುದ್ರನ ಸಭೆಯಲ್ಲಿ ಏಕದಂಡಿ, ದ್ವಿದಂಡಿ, ತ್ರಿದಂಡಿಯೆಂಬ ಮೂವರು ವೈಷ್ಣವ ಕವಿಗಳು ಸಕಲ ವಿದ್ವಾಂಸರು ಮಾಡಿದ ಪದ್ಯಮಂ ಮೂರು ವೇಳೆ ಓದಿಸಿ, ಆ ಪದ್ಯವ ಪಾಠವಾಡಿ ನನ್ನ ಪದ್ಯವ ನೀನೆಲ್ಲಿ ಕಲಿತೆ ಎಂದು ಕವಿಗಳನ್ನು ರಾಜನ ಸಭೆಯಲ್ಲಿ ಮನ್ನಣೆಯಿಲ್ಲದಂತೆ ಸೋಲಿಸುತ್ತಿರಲು, ರಾಘವಾಂಕನು ಆ ವಾಕ್ಯಮಂ (ವಾರ್ತೆಯಂ) ಕೇಳಿ ಕವಿಮುಖ ಕವಾಟವೆಂಬ ಪದ್ಯ ಶಾಸ್ತ್ರವಂ ರಚಿಸಿ ಓರುಗಲ್ಲಿಗೆ (ಓರಂಗಲ್ಲಿಗೆ) ಹೋಗಿ ಆ ಏಕ, ದ್ವಿ, ತ್ರಿ ದಂಡಿಗಳನ್ನು ಸೋಲಿಸಿ ರಾಜನಿಂದ ಮನ್ನಣೆಯನ್ನು ಹೊಂದಿದನು. ಉಭಯಕವಿ ಶರಭಭೇರುಂಡ ರಾಘವಾಂಕ ಪಂಡಿತ ಎಂಬ ಶಿವಕವೀಶ್ವರನ ಕವಿತ್ವದಲ್ಲಿ ತಪ್ಪಿಲ್ಲವೆಂದು, ಸಮಸ್ತ ಸಮಯದ ಕವಿಗಳೆಲ್ಲಾ ಕೀರ್ತಿಸಿದರು' ಎಂದು ಹೇಳಲಾಗಿದೆ.

'ಗುರುರಾಜ ಚಾರಿತ್ರ'ವೆಂಬ ಗ್ರಂಥದಲ್ಲಿ ರಾಘವಾಂಕನನ್ನು ಕುರಿತು-'ಕವಿಕಮಲ ಮಾರ್ಕಾಂಡ' ರಾಘವಾಂಕ ಪಂಪಾ ವಿರೂಪಾಕ್ಷನನು ಸ್ತುತಿಸಿ ಕಂಕಣಕಿರೀಟಾದಿಗಳನನುನಯದಿ ಪಡೆದು ಉಭಯಕವಿ ಶರಭಭೇರುಂಡನೆಂಬ ಪೆಂಡೆಯನ ಧರಿಸಿ ಹರಿಶ್ಚಂದ್ರನ ಕಾವ್ಯವ ಮುರಿದು ಸೋಮನಾಥನ ಕಾವ್ಯವ ಪೇಳಿ ಕುಮಾರವ್ಯಾಸನ ಗೆಲಿದು ಓರುಂಗಲ್ಲಿಗೈದುತ್ತ ಸುಮನಸನ ಲೀಲೆಯಿಂ ಗಂಧರ್ವ ಲೋಕಕ್ಕೆ ಕಳುಹಿ ವೀರೇಶನಾಲಯಕೆ ಹೋಗಿ ದೇಗುಲದ ಹಿಂದೆ ಕುಳಿತು ಭಕ್ತಿಯಿಂದ ಮೊಸಲುಗವಿತೆಯೆಂಬ ಪ್ರಬಂಧವಂ ರಾಗದಿಂದೊರೆದು ದೇಗುಲವನಭಿಮುಖಗೈದು ವೀರಭದ್ರನಂ ರಂಗಸ್ಥಲಕೆ ಬರಿಸಿ ರುದ್ರಪ್ರತಾಪನಿಂ ಪೂಜೆವ್ಡೆದನು' ಎಂದು ವರ್ಣಿಸಲಾಗಿದೆ. ಇಲ್ಲಿ 'ಕುಮಾರವ್ಯಾಸನ ಗೆಲಿದು' ಎಂದರೆ ಆ ಕಾಲದಲ್ಲಿ ಕುಮಾರವ್ಯಾಸನು ಜೀವಿಸಿರಲಿಲ್ಲ. ಕುಮಾರವ್ಯಾಸನು ಬರೆದುದು 'ಭಾಮಿನಿ ಷಟ್ಪದಿ' ಗ್ರಂಥವಾದರೆ, ಆ ಷಟ್ಪದಿಗಿಂತ 'ವಾರ್ಧಿಕ ಷಟ್ಪದಿ' ದೊಡ್ಡದು. ಅದನ್ನು ಈ ಕವಿಯು ಬಳಸಿದುದರಿಂದ 'ಕುಮಾರವ್ಯಾಸನ ಗೆಲಿದು' ಎಂದು ಹೇಳಿರಬೇಕು.

(ಮುಂದುವರಿಯುವುದು)

## ಚಿಂತನ

ನಮ್ಮ ಜನರಿಗೆ ವಿದೇಶೀ ನಿರ್ಮಿತ ವಸ್ತುಗಳೆಂದರೆ ಪಂಚಪ್ರಾಣ. ವಸ್ತುಗಳ ಮೇಲೆ 'ಮೇಡ್ ಇನ್-ಜಪಾನ್, ಚೈನಾ, ಜರ್ಮನಿ, ಸ್ವಿಜರ್‌ಲ್ಯಾಂಡ್' ಮುಂತಾದ ವಿದೇಶಗಳ ಹೆಸರು ಬರೆದಿದ್ದರೆ ಅವು ಅತ್ಯಮೂಲ್ಯ ವಸ್ತುಗಳೆಂದು ಪರಿಗಣಿಸುತ್ತಾರೆ ಮತ್ತು ಆ ವಸ್ತುಗಳನ್ನು ಪ್ರೀತಿಸಿ, ಜೋಪಾನ ಮಾಡುತ್ತಾರೆ. ಇದು ನಮ್ಮವರಿಗೆ ನಮ್ಮ ಜನರಿಗೆ ಬಹಳ ಹಿಂದಿನಿಂದಲೂ ಬಂದ ಪರಿಪಾಠವಾಗಿದೆ.

ಅದೇ 'ಮೇಡ್ ಇನ್ ಇಂಡಿಯಾ' ಆದರೆ ಅದರ ಬಗ್ಗೆ ವ್ಯಾಮೋಹವಿಲ್ಲ. ಅವಗಣನೆ, ನಿಕೃಷ್ಟತೆ ಇತ್ಯಾದಿ ಇದ್ದೇ ಇದೆ. ನಮ್ಮ ದೇಶದ ಕಾನೂನು ನಿರ್ಮಾಪಕರೂ ಇದಕ್ಕೆ ಸರಿಯಾಗಿ ಕಾನೂನು ನಿರ್ಮಿಸುತ್ತಾರೆ. ನಮ್ಮಲ್ಲಿ ಸಿದ್ಧಗೊಂಡ ಆ ವಸ್ತುಗಳು ನಮ್ಮ ದೇಶದ ಕಾರ್ಖಾನೆಗಳಿಂದ ಹೊರ ಬರಬೇಕಾದರೆ ಪ್ರಾರಂಭಗೊಂಡ ಕರ (Tax) ಸಾಮಾನ್ಯ ಮನುಷ್ಯನ ಖರೀದಿಯವರೆಗೆ ಹಲವು ಸಲ ಬೇರೆ ಬೇರೆ ರೀತಿಯಲ್ಲಿ ವಸೂಲಿಯಾದರೆ, ವಿದೇಶದಿಂದ ಬಂದ ಇಂತಹ ವಸ್ತುಗಳಿಗೆ ಯಾವುದೇ ಕರ (Tax) ಇರುವುದಿಲ್ಲ. ಹಾಗಾಗಿ ನಮ್ಮ ದೇಶೀಯ ತಯಾರಿಯ ವಸ್ತುಗಳ ಬೆಲೆ ಈ ವಿದೇಶೀ ವಸ್ತುಗಳ ಬೆಲೆಗಿಂತ ದುಪ್ಪಟ್ಟು ಇರಲು ಕಾರಣವಾಗಿದೆ. ಆದ್ದರಿಂದಲೇ ಹೆಚ್ಚು ಬೆಲೆಯ ಈ ಸ್ವದೇಶೀ ವಸ್ತುಗಳನ್ನು ಯಾರೂ ಕೊಳ್ಳುವುದಿಲ್ಲ.

ಯಾವುದೇ ತಂತ್ರಜ್ಞಾನದಲ್ಲಿ ಅಥವಾ ವಸ್ತುಗಳ ನಿರ್ಮಾಣದಲ್ಲಿ ನಮ್ಮ ಜನರ ಜ್ಞಾನ ಕಡಿಮೆ ಇಲ್ಲ. ವೈಜ್ಞಾನಿಕತೆಯಲ್ಲಿ, ಹೊಸ ಸಂಶೋಧನೆಯಲ್ಲಿ, ಆವಿಷ್ಕಾರಗಳ ಪರಿಷ್ಕರಣೆಯಲ್ಲಿ ನಮ್ಮ ದೇಶವು ಇತರ ಮುಂದುವರಿದ ದೇಶಗಳೊಂದಿಗೆ ಪೈಪೋಟಿಯಲ್ಲಿದ್ದು, ಅವರಿಗಿಂತಲೂ ಮಿಗಿಲು ಎನ್ನಿಸಿಕೊಳ್ಳುವ ಈ ಕಾಲಘಟ್ಟದಲ್ಲಿ ನಮ್ಮ ಕಾರ್ಖಾನೆಗಳಲ್ಲಿ ನಿರ್ಮಾಣಗೊಳ್ಳುವ ಈ ವಸ್ತುಗಳನ್ನು ಕಳಪೆ ಎನ್ನುವುದು ಹಸಿ ಸುಳ್ಳು.

ಆದ್ದರಿಂದ ನಮ್ಮ ಜನರಲ್ಲಿ ಭಾರತೀಯತೆ ಬೆಳೆದು ನಮ್ಮಿಂದ ನಿರ್ಮಿತ ವಸ್ತುಗಳೆಂಬ ಭಾವನೆ ಬೆಳೆಯುವಂತೆ ಆಗಬೇಕು. ಅಲ್ಲದೆ ವಿದೇಶೀ ವಸ್ತುಗಳ ಬೆಲೆಯಲ್ಲಿಯೇ ಅಥವಾ ಅದಕ್ಕಿಂತಲೂ ಕಡಿಮೆ ಬೆಲೆಯಲ್ಲಿ ನಮಗೆ ದೊರಕುವಂತಾಗಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಈ ಬಗ್ಗೆ ರಾಷ್ಟ್ರೀಯ ಜಾಗೃತಿ ನಮ್ಮೆಲ್ಲರಲ್ಲುಂಟಾಗಬೇಕೆಂದು ತಿಳಿಯೋಣವೇ?

## ಅನಿಸಿಕೆ

ಅಕ್ಟೋಬರ್ 2014 ರ ಶ್ರೀ ಶಾರದಾ ಪತ್ರಿಕೆಯಲ್ಲಿ ಪ್ರಕಟವಾದ 'ಚಿಂತನ' ಅರ್ಥಪೂರ್ಣವೂ, ಗಂಭೀರವೂ ಆಗಿತ್ತು. 'ಆನೆ ನಡೆದದ್ದೇ ದಾರಿ' ಎಂಬುದೇನೋ ಸರಿಯಿರಬಹುದು. ಆದರೆ ಮನುಷ್ಯರನ್ನು ಆನೆಗೇ ಹೋಲಿಸಬೇಕಾಗಿ ಬಂದಿರುವುದು ನಮ್ಮ ದುರ್ದೈವವೇ ಎನ್ನಬೇಕು.

"ಆನೆ" ಯಂತೆ ದಾರಿತಪ್ಪಿ ಅಡ್ಡಾದಿಡ್ಡಿ ಸಾಗುವ ಮನುಷ್ಯರನ್ನು ಕಟ್ಟಿ ಹಾಕಿ, ಅವರನ್ನು ಶಿಕ್ಷೆಗೊಳಪಡಿಸಬೇಕಾದುದು ನಮ್ಮೆಲರ ಕರ್ತವ್ಯವಾಗಬೇಕು., ಆನೆಯನ್ನು ತಡೆದು ನಿಲ್ಲಿಸುವ ಸಾಮರ್ಥ್ಯಯಿರುವ ಮನುಷ್ಯನಿಗೆ, ನಾಡಿನಲ್ಲಿರುವ "ಆನೆ"ಗಳನ್ನು ತಡೆದು ನಿಲ್ಲಿಸುವುದು ಕಷ್ಟವಲ್ಲ. ಇಚ್ಛಾಶಕ್ತಿ ಮತ್ತು ಹೋರಾಟದ ಪಣ ಈ ನಿಟ್ಟಿನಲ್ಲಿ ಅತೀ ಅಗತ್ಯ.

-ದಿವಾಣ ಗೋಪಾಲಕೃಷ್ಣ ಭಟ್ಟ,
ಅಂಬಲಪಾಡಿ

## ಶುಭಜನನ

ಉಡುಪಿಯಲ್ಲಿ ವಾಸ್ತವ್ಯದಲ್ಲಿರುವ ಬೆಳ್ಳರ್ಪಾಡಿ ವಿನೋದ್‌ಕುಮಾರ್ (ಸತ್ಯವಿಜಯ ರಾಯರ ಪುತ್ರ) ಮತ್ತು ಶ್ರುತಿ ದಂಪತಿಗಳಿಗೆ ದಿನಾಂಕ 25-10-14 ರಂದು ಹೆಣ್ಣು ಶಿಶುವಿನ ಜನನ.

★★★

ಉಡುಪಿ ಚಿಟ್ಪಾಡಿಯ ನಿವಾಸಿ ಡಾ| ಸನತ್ ರಾವ್ (ಎ. ಶ್ರೀನಿವಾಸ ರಾಯರ ಪುತ್ರ) ಮತ್ತು ಡಾ| ಮಮತಾ ದಂಪತಿಗಳಿಗೆ ದಿನಾಂಕ 31-10-2014ರಂದು ಗಂಡು ಶಿಶುವಿನ ಜನನ.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.), ಉಡುಪಿ

**ಶಾರದಾನಗರ, ಕುಂಜಿಬೆಟ್ಟು, ಉಡುಪಿ**

**2013-14ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು**

ಪ್ರಿಯರೇ, 09-11-2014

ಸಂಘದ ವಾರ್ಷಿಕ ಮಹಾಸಭೆಯು ತಾ.30-11-2014ನೇ ರವಿವಾರ ಅಪರಾಹ್ನ 4-00 ಗಂಟೆಗೆ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಸಭಾಭವನದಲ್ಲಿ ನಡೆಯಲಿದೆ. ಸಂಘದ ಸದಸ್ಯರೆಲ್ಲರೂ ಈ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

**ವಿಷಯ ಸೂಚಿ**

1. ಪ್ರಾರ್ಥನೆ
2. ಸ್ವಾಗತ
3. 2013-14ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸಿನ ಅಂಗೀಕಾರ
4. 2012-13ನೇ ಸಾಲಿನ ವಾರ್ಷಿಕ ಮಹಾಸಭೆಯ ವರದಿ ಅಂಗೀಕಾರ
5. ವಿಶೇಷ ಮಹಾಸಭೆಯ ವರದಿ ಅಂಗೀಕಾರ
6. 2013-14ನೇ ವರ್ಷದ ಕಾರ್ಯಕ್ರಮಗಳ ವರದಿಯ ಅಂಗೀಕಾರ
7. 2013-14ನೇ ವರ್ಷದ ಆಯ-ವ್ಯಯ ಮತ್ತು ಆಸ್ತಿ-ಜವಾಬ್ದಾರಿ ತಃಖ್ತೆಗಳ ಪರಿಶೋಧಿತ ವರದಿಯ ಮಂಡನೆ ಮತ್ತು ಅಂಗೀಕಾರ
8. 2014-15ನೇ ವರ್ಷದ ಅಂದಾಜು ಆಯ-ವ್ಯಯ ಪಟ್ಟಿಯ ಅಂಗೀಕಾರ.
9. 2014-15ನೇ ವರ್ಷಕ್ಕೆ ಲೆಕ್ಕಪರಿಶೋಧಕರ ನೇಮಕ
10. ಅಧ್ಯಕ್ಷರ ಅನುಮತಿಯ ಮೇರೆಗೆ ಬರತಕ್ಕ ಇತರ ವಿಷಯಗಳು
11. ಧನ್ಯವಾದ ಸಮರ್ಪಣೆ

ಸಹಿ/-
**ಕಾರ್ಯದರ್ಶಿ**

ವಿ.ಸೂ. : ಚರ್ಚೆಯ ವಿಷಯ ಇದ್ದಲ್ಲಿ ಅದನ್ನು ತಾ.25-11-2014ರ ಸಂಜೆ 5 ಗಂಟೆಗೆ (ಕಛೇರಿಯ ಕೆಲಸದ ಸಮಯದಲ್ಲಿ) ಮುಂಚಿತವಾಗಿ ಕಾರ್ಯದರ್ಶಿ/ಮೆನೇಜರ್‌ರವರಿಗೆ ಪತ್ರ ಮೂಲಕ ತಲುಪಿಸಬೇಕು.

**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ| ಅಂಬಲಪಾಡಿ ಕೃಷ್ಣ ರಾವ್, ಡಾ| ಪಿ. ವಿಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ| ಕುಂಜಾರು ವಿಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ| ಡಾ| ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎಸ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ| ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ| ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ| ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ

## ...ವೈದಿಕ ಹಾಗೂ ಸ್ಥಾನಿಕ ಬ್ರಾಹ್ಮಣ ಸಮಾವೇಶ

■...1ನೇ ಪುಟದಿಂದ

**ಸಮಾವೇಶದ ನಿರ್ಣಯಗಳು....**

**ನಿರ್ಣಯ 1 : ಪೌರೋಹಿತ್ಯ ನಮ್ಮ ಸಮಾಜದ ಅವಿಭಾಜ್ಯ ಅಂಗವಾಗಿ ಮುನ್ನಡೆಯಬೇಕು. ಪುರೋಹಿತರನ್ನು ಕುಲಪುರೋಹಿತರಾಗಿ ಗೌರವಿಸಬೇಕು. ಪುರೋಹಿತ ವೃತ್ತಿಗೆ ಹೆಚ್ಚಿನ ಪ್ರೋತ್ಸಾಹ ಸಮಾಜ ನೀಡಬೇಕು. ನಿವೃತ್ತ ಉದ್ಯೋಗಿಗಳೂ ವೈದಿಕತೆ ಕಲಿಯಬೇಕು.**

**ನಿರ್ಣಯ 2 : ದೇವಕಾರ್ಯವನ್ನು ಮುಂದುವರಿಸಬೇಕು. ಶೈಕ್ಷಣಿಕವಾಗಿ, ಆರ್ಥಿಕವಾಗಿ ಅಭಿವೃದ್ಧಿಯೊಂದಿಗೆ ವೈದಿಕ ಜ್ಞಾನವನ್ನು ಹೆಚ್ಚಿಸಿಕೊಂಡು ವೃತ್ತಿಯ ಘನತೆಯನ್ನು ಹೆಚ್ಚಿಸಿಕೊಳ್ಳಬೇಕು.**

**ನಿರ್ಣಯ 3 : ಇರುವ ದೇವಸ್ಥಾನಗಳ ಅಭಿವೃದ್ಧಿಗೆ ಸಮಾಜ ಶ್ರಮಿಸಬೇಕು. ದೇವಸ್ಥಾನಗಳ ಒಕ್ಕೂಟ ಬಲಪಡಿಸಬೇಕು. ಸಾರ್ವಜನಿಕರು ಹೆಚ್ಚು ಹೆಚ್ಚು ದೇವಸ್ಥಾನಕ್ಕೆ ಬರುವಂತಹ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ದೇವಸ್ಥಾನಗಳಲ್ಲಿ ಜೋಡಿಸಿಕೊಳ್ಳಬೇಕು.**

**ನಿರ್ಣಯ 4 : ಪ್ರತಿಯೊಬ್ಬ ಸ್ಥಾನಿಕ ಬ್ರಾಹ್ಮಣನೂ ಕನಿಷ್ಠ ವೈದಿಕ ಜ್ಞಾನವನ್ನು ಪಡೆಯಬೇಕು. ಸಂಧ್ಯಾವಂದನೆ, ನಿತ್ಯ ಪೂಜೆ ನಡೆಸಬೇಕು. ನಮ್ಮ ಅಸ್ತಿತ್ವವನ್ನು ಉಳಿಸಬೇಕು. ಹೆಂಗಸರು ಹೊಸ್ತಿಲು ಪೂಜೆ ಮಾಡಬೇಕು.**

ಶ್ರೀ ದುರ್ಗಾಪರಮೇಶ್ವರಿ ಸನ್ನಿಧಿಯ ಅರ್ಚಕರಾದ ಶ್ರೀ ಶ್ರೀನಾಥ ಕೊಲ್ಲಗಾನ ರವರು ಪೌರೋಹಿತ್ಯ ವೃತ್ತಿ ಕ್ಷೀಣತೆಯ ಸಮಸ್ಯೆಯ ಬಗ್ಗೆ ಮಾತನಾಡುತ್ತಾ ಹಿಂದಿನ ಕಾಲದಲ್ಲಿ ಕಾಸರಗೋಡು, ಕುಂಬಳೆ, ಮಂಗಳೂರು ಉಡುಪಿಗಳಲ್ಲಿ ನೆಲೆಸಿದ್ದ ಸ್ಥಾನಿಕರೊಳಗೆ ಬೇಧ ಭಾವಗಳಿದ್ದರೂ ಇಂದು ಅಂತಹ ಕೀಳಭಿಪ್ರಾಯ ನಿವಾರಣೆಗೊಂಡು ಇಂತಹ ಸಮಾವೇಶಗಳನ್ನು ಎದುರಿಸುತ್ತಿರುವುದು ಸಂತೋಷದ ಸಂಗತಿ. ವ್ಯಕ್ತಿಗೆ ಶೋಡಷ ಕರ್ಮಗಳನ್ನು ಮಾಡಿಸಲು, ನಾವೂ ಬ್ರಾಹ್ಮಣರೆಂದು ತೋರಿಕೊಳ್ಳಲು-ಅರ್ಚಕರು, ಜನಮೆಚ್ಚುವ ಪುರೋಹಿತರೂ, ಆಚಾರಯುಕ್ತ ವೈದಿಕರೂ ಆಗಿ ಸಮಾಜದಲ್ಲಿ ಗುರುತಿಸಿಕೊಳ್ಳುವ ಅಗತ್ಯವಿದೆ ಎಂದರು.

ನಂತರ ಕಾರ್ಕಳ ನಕ್ರೆಯ ಶ್ರೀ ನಕ್ರೆ ಶಿವರಾಯರು ಮಾತನಾಡಿ 'ದೇವಕಾರಿ' ಎಂಬ ಶಬ್ದವೇ ಈಗಿನದು. ಸರಕಾರದ ಭೂಮಸೂದೆಯ ಕಾರಣದಿಂದ ದೇವಳದ ಯಾವತ್ತೂ ಕೆಲಸಗಳನ್ನು ಮಾಡಬಾರದೆನ್ನುವ ಘೋಷಣೆಗಳೂ ಕೆಲವು ವರ್ಷಗಳ ಹಿಂದೆ ನಮ್ಮ ಸಮಾಜದ ನಡುವೆ ಇತ್ತು. ಬೇರೆ ವೃತ್ತಿ, ದೊಡ್ಡ ಹುದ್ದೆ ಅಲಂಕರಿಸಿದ ವ್ಯಕ್ತಿಗಳೂ ನಮ್ಮ ಸಮಾಜದಲ್ಲಿದ್ದಾರೆ. ದೇವಕಾರ್ಯದ ಜೊತೆಯಲ್ಲಿದ್ದರೆ ಇದು ಸಾಧ್ಯವಾಗುತ್ತಿತ್ತೇ ಗೊತ್ತಿಲ್ಲ. ದೇವಸ್ಥಾನದಲ್ಲಿ ಕೆಲಸ ಮಾಡುವ ನಾವು ನಮ್ಮ ಸ್ವಚ್ಛ ನಡವಳಿಕೆಯೊಂದಿಗೆ ಇತರ ಸಮಾಜವನ್ನು ಒಲಿಸಿಕೊಳ್ಳಲು ಸಾಧ್ಯ ಎಂದು ಅಭಿಪ್ರಾಯ ಪಟ್ಟರು.

ಕಡಬ ನಾಲೂರು ಶ್ರೀ ಶಂಕರ ನಾರಾಯಣ ದೇವಳದ ಅರ್ಚಕರಾದ ಶ್ರೀ ಕೆ. ಶಶಿಧರರಾವ್ ತಮ್ಮ ಅಭಿಪ್ರಾಯ ಮಂಡನೆ ಮಾಡಿ ನಮ್ಮ ಸಮಾಜದ ಮಕ್ಕಳಿಗೆ ಕನಿಷ್ಠ ವೈದಿಕ ಜ್ಞಾನ ಇರಬೇಕು. ಈ ವೈದಿಕ ವೃತ್ತಿಯಲ್ಲಿ ತೊಡಗಿಸಿಕೊಳ್ಳಲು ಹೆತ್ತವರು ಮಕ್ಕಳನ್ನು ಪ್ರೋತ್ಸಾಹಿಸಬೇಕು. ಭಸ್ಮ ಧಾರಣೆ, ಸ್ವಚ್ಛಮಂತ್ರ ಪಠಣ, ಭಜನೆಮಾಡುವುದು ಮೊದಲಾದುವುಗಳ ಮೂಲಕ ಸ್ಥಾನಿಕ ಸಮಾಜ ಇನ್ನೂ ಎತ್ತರಕ್ಕೇರಬೇಕು ಎಂದರು.


ಪಡುಬಿದ್ರೆಯ ಶ್ರೀ ಬಾಲಗಣಪತಿ-ಪ್ರಸನ್ನ ಪಾರ್ವತಿ ದೇವಳದ ಅರ್ಚಕರಾದ ಶ್ರೀ ಜಗದಾಭಿರಾಮಸ್ವಾಮಿಯವರು ಹೊಸ ಗುಡಿ-ದೇವಾಲಯಗಳ ನಿರ್ಮಾಣಕ್ಕಿಂತಲೂ ಇದ್ದ ಹಳೆಯ ದೇವಸ್ಥಾನ ಅಲ್ಲಿಯ ಸಾಂಪ್ರದಾಯಿಕ ನಡಾವಳಿಗಳ ಬಗ್ಗೆ ತಿಳಿದುಕೊಂಡು ಅವುಗಳ ಅಭಿವೃದ್ಧಿ ಹಾಗೂ ಧಾರ್ಮಿಕತೆಯನ್ನು ಕ್ರಮಪ್ರಕಾರ ನಡೆಸಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಪ್ರಾಚೀನ ಕಾಲದಿಂದಲೂ ನಂಬಿಕೆಗೆ ಅರ್ಹವಾದ ಸ್ಥಾನಿಕ ಬ್ರಾಹ್ಮಣರು ಮೊದಲು ಮನೆಯಲ್ಲಿಯೇ ಬ್ರಾಹ್ಮಣರಾಗೋಣ. ನಂತರ ನಮ್ಮ ಉಡುಪು, ವಿದ್ಯಾ ಸಂಪನ್ನತೆ, ಮತ್ತು ಸ್ವಚ್ಛ ನಡವಳಿಕೆಯೊಂದಿಗೆ ಸಮಾಜದಲ್ಲಿಯೂ ಬ್ರಾಹ್ಮಣರಾಗಿ ಗುರುತಿಸಿಕೊಳ್ಳೋಣ ಎಂದು ಅಭಿಪ್ರಾಯ ಮಂಡಿಸಿದರು.

ಪುತ್ತೂರು ಬೆಟ್ಟಂಪಾಡಿಯ ಶ್ರೀ ಬೆಟ್ಟಂಪಾಡಿ ವೆಂಕಟ್ರಾಯರು ಸ್ಥಾನಿಕ ಸಮಾಜಕ್ಕೆ ಈ ಹಿಂದೆ ಇದ್ದ ಕಷ್ಟ-ಬಡತನ-ಸಾಮಾಜಿಕ ಹಿನ್ನಡೆ ಈಗ ಇಲ್ಲ. ಆದರೂ ಸಮಾಜದಲ್ಲಿ ಬೇರೆ ಬ್ರಾಹ್ಮಣ್ಯದ ನಡುವೆ ಹೊಕ್ಕು ಬಳಿಕ ಬರಬೇಕಾದರೆ ನಾವೂ ಆರ್ಥಿಕ ಸಂಪನ್ನತೆಯನ್ನು ಪಡೆಯಬೇಕು. ಅದಕ್ಕಾಗಿ ನಮ್ಮ ಯಾವುದೇ ವೃತ್ತಿ ನಡುವೆ ನಮ್ಮ ಮನೆಯಲ್ಲಿಯೇ ಧಾರ್ಮಿಕ ವಿಧಿಗಳನ್ನು ಕ್ರಮಬದ್ಧವಾಗಿ ಆಚರಿಸೋಣ. ಈ ಮೂಲಕ ಇತರರಿಗೆ ಮಾದರಿಯಾಗೋಣ ಎಂದು ಹೇಳಿದರು.

ಸುರತ್ಕಲ್ ಸ್ಥಾನಿಕ ಸಮಾಜದ ಅಧ್ಯಕ್ಷರಾದ ಶ್ರೀ ಮಾಧವ ರಾವ್ ಶ್ರೀಮತಿ ಜಯಲಕ್ಷ್ಮೀ ಪ್ರಸನ್ನ ಕುಮಾರ್ ಸಮಯೋಚಿತವಾಗಿ ಮಾತನಾಡಿದರು.

### ಸ್ವಾಮೀಜಿಯವರಿಂದ ಅನುಗ್ರಹ ಭಾಷಣ

ವೈದಿಕರೆಂದರೆ ಸಂಕೋಚ ಅರ್ಥವನ್ನು "ಕರ್ಮಾಂಗ ಮಾಡಿಸುವವನು" ಆಗಿದೆ. ಆದರೆ ಅದರ ವಿಸ್ತಾರ ಅರ್ಥ ಹಾಗಿಲ್ಲ. ವೇದವನ್ನು ಯಾರು ಗೌರವಿಸುತ್ತಾನೋ ಯಾರು ಪ್ರಮಾಣೀಕರಿಸುತ್ತಾನೋ. ಅವನು ವೈದಿಕ ಎನಿಸುತ್ತಾನೆ. ಯಾರು ಲೌಕಿಕರೋ ಅವರೆಲ್ಲಾ ವೈದಿಕರು. ಯಾರು ವೈದಿಕರೋ ಅವರೆಲ್ಲಾ ಲೌಕಿಕರು ನಮ್ಮ ವೈದಿಕರಲ್ಲಿ ಇವೆಲ್ಲಾ ಕೆಲಸಗಳು ಆಗದೆ ಇದ್ದು, ಅಲ್ಪ ವಿದ್ಯೆ ಕಲಿತು ಅಹಂಕಾರ ಪಡುತ್ತಾರೆ ಹಾಗಾಗಿ ಅವರಲ್ಲಿ ಒಗ್ಗಟ್ಟು ಇರಲು ಸಾಧ್ಯವಾಗಿಲ್ಲ. ಈ ಅಲ್ಪತನವು ನಿವಾರಣೆಯಾಗಬೇಕು. "ವಿದ್ಯಾ ದಧಾತಿ ವಿನಯಂ" ಎನ್ನುವಂತೆ ಕಲಿತಂತೆ ಹೆಚ್ಚು ಬಾಗುತ್ತಾನೆ. ಅದಕ್ಕಾಗಿ ವೇದಾಧ್ಯಯನ ಮಾಡಬೇಕು ಎಂದು ಹೇಳಿದರು. ದೇವಕಾರ್ಯ ಅಪಮಾನ ಕಾರ್ಯವಲ್ಲ. ದೇವಕಾರಿಗಳು ವೇದಾಧ್ಯಯನ ಮಾಡಲಿ. ಅಲ್ಲಿಯ ಪುರೋಹಿತರೊಂದಿಗೆ ತಾನೂ ವೇದಘೋಷ ಮಾಡಲಿ. ಆಗ ಅವನ ವರ್ಚಸ್ಸು, ಘನತೆ ತನ್ನಷ್ಟಕ್ಕೆ ಎತ್ತರಕ್ಕೇರುತ್ತಾರೆ. ಹೀಗೆ ದೇವಸ್ಥಾನಗಳೂ ಹೆಚ್ಚಬೇಕು. ಆಗ ಹೆಚ್ಚು ವೈದಿಕರ ಅಗತ್ಯ ಬೀಳುತ್ತದೆ. ಅದಕ್ಕಾಗಿಯಾದರೂ ಅರ್ಚಕ ವೃತ್ತಿ, ವೈದಿಕ ವೃತ್ತಿ ಕಲಿಯುವಂತಾಗಲಿ. ಬ್ರಾಹ್ಮಣ್ಯದಲ್ಲಿ ಹುಟ್ಟಿ ಪಂಚಾಯತನ ಪೂಜಾ ಪದ್ಧತಿ ಕಲಿತು ಅದ್ವೈತಿಗಳಾಗಿ, ಸ್ಥಾನಿಕರಾಗಿ ಉಳಿದರೆ ನಾಚಿಕೊಳ್ಳಬೇಕಾದ ಪ್ರಮೇಯವೇ ಇಲ್ಲ. ಆದ್ದರಿಂದ ಸ್ಥಾನಿಕ ಸಮಾಜದ ಎಲ್ಲರೂ ಅದರಲ್ಲಿಯೂ ಮಹಿಳೆಯರು ಈ ಬಗ್ಗೆ ಹೆಚ್ಚು ಗಮನ ಕೊಡಬೇಕು ಎಂದು ತಮ್ಮ ಆಶೀರ್ವಚನದಲ್ಲಿ ಹೇಳಿದರು.



ಶ್ರೀ ಪಾವಂಜೆ ಜಗದೀಶ್ ಉಪಾಧ್ಯಾಯರು ಮತ್ತು ಶ್ರೀ ಸತೀಶ್ ಭಟ್ ಇವರಿಗೆ ವೇದಿಕೆಗೆ ಆಹ್ವಾನಿಸಿ ಶಾಲು ಹೊದಿಸಿ ಗೌರವಿಸಲಾಯಿತು.

ಸಮಾವೇಶದ ಅಧ್ಯಕ್ಷರಾದ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಅಧ್ಯಕ್ಷರಾದ ಶ್ರೀ ಎಂ. ಆರ್. ವಾಸುದೇವ ಅಧ್ಯಕ್ಷ ಭಾಷಣದಲ್ಲಿ ಇಂತಹ ಸಮಾರಂಭಗಳಿಗೆ ನಮ್ಮ ಮಕ್ಕಳೇಕೆ ಬರುತ್ತಿಲ್ಲ. ಹೆತ್ತವರು ಏಕೆ ಕರೆದುಕೊಂಡುಬರಲಾಗುದಿಲ್ಲ? ಎಂದು ಪ್ರಶ್ನಿಸಿ- ಮಕ್ಕಳಿಗೆ ನಮ್ಮ ಸಂಸ್ಕೃತಿ-ಮಂತ್ರ-ಪಠಣ-ಭಜನೆ ಮೊದಲಾದವುಗಳನ್ನು ಅಭ್ಯಾಸ ಮಾಡಿಸಿ ಬ್ರಾಹ್ಮಣರಾಗಲು ಕಲಿಸಿ ನಂತರ ವೈದಿಕರಾಗೋಣ. ದೇವಕಾರ್ಯ ಚಾಕರಿ ಅಲ್ಲ. ದೇವರ ಕೆಲಸ. ಅದರಲ್ಲಿಯೂ ನಾವು ನಮ್ಮನ್ನು ತೊಡಗಿಸಿಕೊಳ್ಳೋಣ ಎಂದು ಹೇಳಿದರು.

ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳಿಗೆ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ) ಹಾಗೂ ಋಕ್ ಸಂಹಿತಯಾಗ ಸಮಿತಿ ಪಡುಬಿದ್ರಿಯ ವತಿಯಿಂದ ನೀಡಲಾದ ಮಾನಪತ್ರವನ್ನು ಶ್ರೀ ಎಂ.ಆರ್ ವಾಸುದೇವ ವಾಚಿಸಿದರು. ನಂತರ ಪದಾಧಿಕಾರಿಗಳೆಲ್ಲ ಜೊತೆಗೂಡಿ ಶ್ರೀ ಶ್ರೀಗಳಿಗೆ ಫಲ ಪುಷ್ಪಗಳೊಂದಿಗೆ ಮಾನಪತ್ರವನ್ನು ಅರ್ಪಿಸಿದರು.

ಸಮ್ಮೇಳನದ ನಿರ್ಣಯವನ್ನು ಶ್ರೀ ಎನ್.ಕೆ ಜಗನ್ನಿವಾಸ ರಾವ್ ಮಂಗಳೂರು ಸಭೆಯಲ್ಲಿ ಮಂಡಿಸಿದರು. ಅದಕ್ಕೆ ಸಭೆಯಲ್ಲಿ ಚಪ್ಪಾಳೆಯ ಮೂಲಕ ಅನುಮೋದನೆ ದೊರೆಯಿತು.

ಕೊನೆಯಲ್ಲಿ ಪಡುಬಿದ್ರಿಯ ಶ್ರೀ ಎಂ.ಕೆ. ಮೋಹನರಾಯರು ವಂದನಾರ್ಪಣೆ ಮಾಡಿದರು.

ಡಾ। ಸುದರ್ಶನ್ ರಾವ್ ಕಾರ್ಯಕ್ರಮ ಸಂಯೋಜನೆ ಮಾಡಿದರು.



## ಪಡುಬಿದ್ರಿಯಲ್ಲಿ ಋಕ್‌ಸಂಹಿತಾ ಯಾಗ ಸಂಪನ್ನ

■...1ನೇ ಪುಟದಿಂದ

### ಯಾಗದಲ್ಲಿ ಅತಿಥಿ ಸತ್ಕಾರ-ಭೋಜನ-ಉಪಾಹಾರ

ಯಾಗ ಪ್ರಾರಂಭಗೊಂಡ ದಿನಾಂಕ 26-10-2014ರಿಂದ ಮೊದಲ್ಗೊಂಡು ಯಾಗದ ಕೊನೆಯ ದಿನ 02-11-2014ರ ವರೆಗೂ ಪ್ರತಿದಿನ ಸದಾಕಾಲ ಚಹಾ ಕಾಫಿ ಪಾನೀಯಗಳು ಉಪಹಾರದೊಂದಿಗೆ ವ್ಯವಸ್ಥಿತವಾಗಿ ವಿತರಿಸಲಾಗುತ್ತಿತ್ತು. ದಿನಂಪ್ರತಿ ಭೋಜನಕ್ಕೆ 300-350 ಜನರು ಸೇರುತ್ತಿದ್ದರೆ ಮೊದಲ ದಿನ 600 ಹಾಗೂ ಕೊನೆಯ ದಿನ 2000 ಜನ ಭಕ್ತ ಬಾಂಧವರು ನೆರೆದಿದ್ದು ವಿಶೇಷವಾಗಿತ್ತು. ಅಲ್ಲದೆ ಉಪಾಹಾರ, ಊಟಕ್ಕೆ ಬಗೆ ಬಗೆಯ ತಿಂಡಿ-ಭಕ್ಷ್ಯ ಭೋಜ್ಯಗಳ ಅಡುಗೆ ಕ್ಲಪ್ತ ಸಮಯಕ್ಕೆ ಸಿದ್ಧಗೊಳ್ಳುತ್ತಿತ್ತು. ಈ ಊಟ ಉಪಾಹಾರವು ಎಲ್ಲರಿಂದ ಸೈ ಎನಿಸಿಕೊಂಡಿತ್ತು. ಈ ಅಡುಗೆ-ಉಪಾಹಾರವನ್ನು ವ್ಯವಸ್ಥಿತವಾಗಿ ಅಚ್ಚುಕಟ್ಟಾಗಿ ನಿರ್ವಹಿಸಿದವರು ಮುಂಡ್ಕೂರು ಯೋಗೀಶ್ ರಾವ್ ಮತ್ತು ತಂಡದವರು. ಇತ್ತೀಚೆಗೆ ಮೂಡಬಿದ್ರೆಯಲ್ಲಿ ನಡೆದ ಆಳ್ವಾಸ್ ನುಡಿಸಿರಿಯಲ್ಲಿ ಶ್ರೀ ಯೋಗೀಶ್ ರಾವ್ ಇವರಿಗೆ "ಶ್ರೇಷ್ಠ ಯುವ ಬಾಣಸಿಗ" ಪ್ರಶಸ್ತಿ ನೀಡಿ ಗೌರವಿಸಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

### ಸಮಾವೇಶದಲ್ಲಿ ಉಲ್ಲೇಖಿಸಲ್ಪಟ್ಟ ನಮ್ಮ ಹಿರಿಯರ ಹೆಸರುಗಳು

ಪಡುಬಿದ್ರೆಯಲ್ಲಿ ನಡೆದ ಋಕ್ ಸಂಹಿತಾ ಯಾಗದ ಹಾಗೂ ಸಮಾವೇಶದುದ್ದಕ್ಕೂ ಅನೇಕ ಭಾಷಣಕಾರರು ಆಗಮಿಸಿದ್ದು, ನಮ್ಮ ಸಮಾಜದ ಹಿರಿಯರ ಬಹಳಷ್ಟು ಸಾಧನೆಗಳನ್ನು ಗುರುತಿಸಿ ಹೊಗಳಿದ್ದಾರೆ. ಉಲ್ಲೇಖಿಸಲ್ಪಟ್ಟ ಹೆಸರುಗಳು-ಪಾವಂಜೆ ಲಕ್ಷ್ಮೀನಾರಾಯಣಪ್ಪಯ್ಯ, ಪಾರ್ತಿಸುಬ್ಬ, ಎನ್.ಡಿ.ಜಗನ್ನಾಥ ರಾವ್, ಎನ್.ಡಿ. ಕೃಷ್ಣರಾವ್, ರಾಮ್‌ಮೋಹನ್ ರಾವ್, ಎಂ.ವಿ.ಶಾಸ್ತ್ರೀ ಮಂಗಳೂರು, ಡಾ। ಲಲಿತಾ ಶಾಸ್ತ್ರೀ, ರವಿಶಾಸ್ತ್ರೀ, ದ್ವಿವೇದಿ ಸೀತಾರಾಮ ಶಾಸ್ತ್ರೀ ಪಾವಂಜೆ, ನಿರ್ಜಾಲು ಪೆರಡಾಲ ಕೃಷ್ಣಯ್ಯ, ಗೊಂಬೆಯಾಟದ ಕೆ.ವಿ.ರಮೇಶ್, ಅಡೂರು ಸುಬ್ಬರಾಯರು, ಕಲ್ಲಕಟ್ಟ ನಾರಾಯಣಯ್ಯ, ಅಕ್ಕಮ್ಮ, ಸಿರಿಗನ್ನಡ ಪ್ರೆಸ್ ವೆಂಕಟಕೃಷ್ಣಯ್ಯ, ಕೂಡ್ಲು ಶ್ಯಾಮರಾವ್, ಎಂ.ವ್ಯಾಸ, ವರದರಾಜ ಚಂದ್ರಗಿರಿ, ಅಂಬಲಪಾಡಿ ಕೃಷ್ಣರಾವ್, ಅಡೂರು ಶ್ರೀಧರ ರಾವ್, ಎ.ಈಶ್ವರಯ್ಯ ಮಣಿಪಾಲ, ಎನ್.ಪಿ.ಕೋಳ್ವೆ, ತುದಿಯಡ್ಕ ವಿಷ್ಣ್ವಯ್ಯ, ಪಿ.ಕಾಳಿಂಗರಾವ್, ನೀಲಾವರ ರಾಮಕೃಷ್ಣಯ್ಯ, ನೀಲಾವರ ಲಕ್ಷ್ಮೀನಾರಾಯಣಯ್ಯ, ಸಕ್ಕಟ್ಟು ಲಕ್ಷ್ಮೀನಾರಾಯಣಯ್ಯ.

# ಅಮೇರಿಕ ಪ್ರವಾಸ

–ಮಹಾಲಕ್ಷ್ಮೀ ಶಾನುಭಾಗ್, ಅಂಬಲಪಾಡಿ.


**ಪಶ್ಚಿಮ ಅಮೇರಿಕ** : ನಯಾಗರ ಜಲಪಾತ ವೀಕ್ಷಣೆಯ ಬಳಿಕ ಮರುದಿನ ಪಶ್ಚಿಮ ಅಮೇರಿಕದಲ್ಲಿರುವ "LAS VEGASî ಪಟ್ಟಣವನ್ನು ನೋಡಲು ನಾವು 'Bafalowí ವಿಮಾನ ನಿಲ್ದಾಣದಿಂದ ಮಧ್ಯಾಹ್ನ ಒಂದು ಗಂಟೆಗೆ 'East and West Airwaysí ವಿಮಾನದಲ್ಲಿ ಹೊರಟೆವು. ಈ ವಿಮಾನದ ಪ್ರಯಾಣವು ಕಡಿಮೆ ಖರ್ಚಿನ (Law cost) ವಿಮಾನಯಾನವಾಗಿದ್ದು ಇದರಲ್ಲಿ ಸೀಟ್ ನಂಬರ್ ಇಲ್ಲದೆ ನಾವು ಇಷ್ಟ ಆದ ಸೀಟಿನಲ್ಲಿ ಕುಳಿತು ಪ್ರಯಾಣಿಸಬಹುದು. ಪ್ರಯಾಣದಲ್ಲಿ ಪಾನೀಯ ಮತ್ತು ಬಿಸ್ಕತ್ ಇತ್ಯಾದಿ ಕೊಡುತ್ತಾರೆ. ಈ ವಿಮಾನದಲ್ಲಿ ಸುಮಾರು 5 ಗಂಟೆ ಪ್ರಯಾಣಿಸಿದ ಬಳಿಕ 'Las Vegasí ವಿಮಾನ ನಿಲ್ದಾಣವನ್ನು ತಲುಪಿದೆವು. ಅಲ್ಲಿಂದ ಹೋಟೆಲ್ 'Circus Circusí ತಲುಪಿ ರೆಸ್ಟ್ ತೆಗೆದುಕೊಂಡು ರಾತ್ರಿ ಊಟದ ಬಳಿಕ ಲೈಟಿನ ಬೆಳಕಿನಲ್ಲಿ ಜಗಮಗಿಸುತ್ತಿದ್ದ ಲಾಸ್ ವೇಗಾಸ್‌ನ ವೀಕ್ಷಣೆಗೆ ಹೊರಟೆವು.

ëLas Vegasí ಪಟ್ಟಣವು ಮರುಭೂಮಿಯಲ್ಲಿ ಅರಳಿದ ಅತ್ಯಾಧುನಿಕ ಗಗನಚುಂಬಿ ಕಟ್ಟಡಗಳ ನಗರ. ಇಲ್ಲಿ ಅಸಂಖ್ಯಾತ ಕ್ಯಾಸಿನೋಗಳಿದ್ದು ಜೂಜುಕೋರರ ಸ್ವರ್ಗ ಎನಿಸಿದೆ. ರಾತ್ರಿಯಲ್ಲಿ ಈ ನಗರವು ಪ್ರಖರ ವಿದ್ಯುದ್ದೀಪಗಳಿಂದಲೂ ಬಣ್ಣಬಣ್ಣದ ಬೆಳಕಿನಿಂದಲೂ ಕಂಗೊಳಿಸುವ ಗಗನ ಚುಂಬಿ ಕಟ್ಟಡಗಳಿಂದಾಗಿ ಪ್ರವಾಸಿಗರ ಮನ ಸೆಳೆಯುತ್ತದೆ. ನಾವು ಇಳಿದು ಕೊಂಡಿದ್ದ ëCircus Circusí ಹೋಟೆಲ್ 30 ಮಹಡಿಗಳ ಹಲವಾರು ಕಟ್ಟಡಗಳನ್ನು ಒಳಗೊಂಡ ಸಂಕೀರ್ಣವಾಗಿದ್ದು ಒಂದು ಸಾವಿರಕ್ಕಿಂತಲೂ ಅಧಿಕ ರೂಮುಗಳಿದ್ದವು. ತಳಭಾಗದಲ್ಲಿ ರಾತ್ರಿ ಹಗಲು ನಡೆಯುವ ಕ್ಯಾಸಿನೋಗಳು, ಶಾಪಿಂಗ್ ಮಾಲ್‌ಗಳು, ಮಕ್ಕಳಿಗೆ ಮತ್ತು ದೊಡ್ಡವರಿಗೆ ಆಡಲು ಹಲವು ಬಗೆಯ (Fun World) ಆಟದ ವಿಭಾಗಗಳಿದ್ದವು. ಜೂಜು ಇಲ್ಲಿಯ ಪ್ರಮುಖ ಆಕರ್ಷಣೆ ಮತ್ತು ಆದಾಯದ ಮೂಲವಾಗಿದ್ದು, ಜಗತ್ತಿನ ಬೇರೆ ಬೇರೆ ದೇಶಗಳಿಂದ ಜನರು ಕ್ಯಾಸಿನೋದಲ್ಲಿ ಜೂಜು ಆಡಲಿಕ್ಕಾಗಿಯೇ ಇಲ್ಲಿಗೆ ಬರುತ್ತಾರೆಂದು ಕೇಳಿದೆವು. ಬಗೆಬಗೆಯ ಕ್ಯಾಸಿನೋಗಳನ್ನು ವೀಕ್ಷಿಸಿ ಬೆರಗಾದೆವು.

ಮರುದಿನ ನಾವೆಲ್ಲರೂ ಅಲ್ಲಿಯ ಸುಪ್ರಸಿದ್ಧ ನೈಸರ್ಗಿಕ ಪ್ರೇಕ್ಷಣೀಯ ಸ್ಥಳವಾದ "GRAND CANYON" ನೋಡಲು ಹೋದೆವು. ಇಲ್ಲಿ ಬೆಟ್ಟಗಳ ನಡುವೆ ತುಂಬಾ ಆಳದಲ್ಲಿ 'ಕೊಲೆರಡೊ' ನದಿಯು ಸಾವಿರಾರು ವರ್ಷಗಳಿಂದ ಹರಿದು ಬೆಟ್ಟಗಳನ್ನು ಕೊರೆದು ಮಾಡಿದ ಚಿತ್ರ ವಿಚಿತ್ರ ವಿನ್ಯಾಸಗಳನ್ನು ನೋಡಬಹುದು. ನದಿಯು ಸುಮಾರು 349 ಕಿ.ಮೀ ಉದ್ದವಾಗಿದ್ದು 29 ಕಿ.ಮೀ ಅಗಲವಾಗಿದೆ. ಬೆಟ್ಟಗಳಲ್ಲಿ ನದಿಯ ಆಳ ಕೆಲವು ಕಡೆ 1,400 ಮೀಟರ್ ಇದೆ. ಈ ಪ್ರದೇಶವನ್ನು 15 ರಿಂದ 20 ಜನ ಕುಳಿತುಕೊಳ್ಳುವ ಸಣ್ಣ ವಿಮಾನದಲ್ಲಿ ಅತಿ ಸಮೀಪದಿಂದ ಒಂದು ಗಂಟೆ ಸುತ್ತಾಡಿಸಿ ತೋರಿಸುತ್ತಾರೆ. ಈ GRAND CANYON ವೀಕ್ಷಣೆಗೆ ಪ್ರತಿಯೊಬ್ಬರಿಂದಲೂ 180 ಡಾಲರ್ ಶುಲ್ಕ ತೆಗೆದುಕೊಳ್ಳುತ್ತಾರೆ. ವಾಪಾಸ್ ಬಂದ ಮೇಲೆ ಟೂರಿನ ನೆನಪಿಗೆಂದು ಪೈಲೆಟ್‌ನ ಜೊತೆಗಿರುವ ನಾವು ಪ್ರಯಾಣಿಸಿದ ವಿಮಾನದ ಫೋಟೋ ಹಾಗೂ ಒಂದು ಸರ್ಟಿಫಿಕೇಟ್ ಕೊಡುತ್ತಾರೆ.

ಬಳಿಕ ಅದೇ ದಿನ ರಾತ್ರಿ 'Bellagioí ಎಂಬಲ್ಲಿ ನಾವು ನೋಡಿದ ಸಂಗೀತ ಕಾರಂಜಿ ಪ್ರದರ್ಶನವು ಅತ್ಯದ್ಭುತವಾಗಿತ್ತು. ಸಂಗೀತಕ್ಕೆ ತಕ್ಕಂತೆ ನರ್ತಿಸುತ್ತಾ ನೀರನ್ನು ಚಿಮ್ಮುತ್ತಿರುವ ಬಣ್ಣ ಬಣ್ಣದ ಕಾರಂಜಗಳ ದೃಶ್ಯ ನಯನ ಮನೋಹರವಾಗಿತ್ತು. ಕೇಂದ್ರ ಭಾಗದಲ್ಲಿ 275 ಮೀಟರ್ ಎತ್ತರಕ್ಕೆ ನೀರನ್ನು ಚಿಮ್ಮಿಸುವ ಒಂದು ಕಾರಂಜಿಯಿದ್ದು ಇದು ವಿಶ್ವದ ಅತ್ಯಂತ ಎತ್ತರ ಚಿಮ್ಮುವ ದಾಖಲೆ ಹೊಂದಿದೆ.

ಬಳಿಕ ನಾವು ನೋಡಿದ Fre Mont Streetನಲ್ಲಿ ಸುಮಾರು 17 ಮಿಲಿಯ ಡಾಲರ್ ವೆಚ್ಚದಲ್ಲಿ ರಸ್ತೆಯ ಅಕ್ಕಪಕ್ಕ ಮತ್ತು ಮೇಲೆ ಛಾವಣಿಯಲ್ಲಿ ಅಸಂಖ್ಯಾತ LED ಬಲ್ಬ್‌ಗಳನ್ನು ಜೋಡಿಸಿ ಮಾಡಿದ ದೀಪಾಲಂಕಾರವನ್ನು ವರ್ಣಿಸಲು ಅಸಾಧ್ಯ. ಇದು ಪ್ರತಿದಿನ ರಾತ್ರಿ ಹೊತ್ತಿನಲ್ಲಿ ನಡೆಯುವ ಹತ್ತು ನಿಮಿಷದ ಪ್ರದರ್ಶನವಾಗಿದ್ದು ಇದನ್ನು ವೀಕ್ಷಿಸಲು ಸಹಸ್ರಾರು ಸಂಖ್ಯೆಯಲ್ಲಿ ಜನ ಸೇರುತ್ತಾರೆ. ಈ ಸಮಯದಲ್ಲಿ ಇಡೀ ಆ ಪ್ರದೇಶದ ವಿದ್ಯುದ್ದೀಪ ಆರಿಸುತ್ತಾರೆ. ಹೀಗೆ ಎರಡು ದಿನ Las Vegas ನಲ್ಲಿ ಕಳೆದು ಬಳಿಕ ìLos Angelesîಗೆ ಹೊರಟೆವು. ಈ ಮಧ್ಯೆ ಡೆಲ್ಲಿಯಿಂದ ಬಂದಿದ್ದ ನಮ್ಮ ಸಹಪ್ರವಾಸಿಯೊಬ್ಬರಿಗೆ ಆರೋಗ್ಯ ಹದಗೆಟ್ಟು ತುರ್ತಾಗಿ ಆಸ್ಪತ್ರೆ ಸೇರಬೇಕಾಯಿತು. ನಮ್ಮ ಟೂರ್‌ಮೆನೇಜರ್ ಹೋಟೆಲಿನವರಿಗೆ ವಿಷಯ ತಿಳಿಸಿದ ತಕ್ಷಣ ಪೋಲೀಸ್, ಡಾಕ್ಟರ್, ಅಂಬ್ಯುಲೆನ್ಸ್ ಬಂದು ಟ್ರೀಟ್‌ಮೆಂಟ್ ಕೊಟ್ಟು ಆಸ್ಪತ್ರೆಗೆ ಸೇರಿಸಿ, Sanfranciscoದಲ್ಲಿದ್ದ ಅವರ ಮಗನನ್ನು ಕರೆಸಿದರು. ಈ ನಿಟ್ಟಿನಲ್ಲಿ ಅವರ ಸೇವೆ ಹಾಗೂ ಕಾರ್ಯವೈಖರಿ ಮೆಚ್ಚುವಂತಹದ್ದು.



ìLos Angelesî ಸುತ್ತಾಡಿ ಬಳಿಕ ಚಲನಚಿತ್ರ ಜಗತ್ತಿನ ಸ್ವರ್ಗ ಎನಿಸಿದ Hollywoodಗೆ ಬಂದೆವು. ಅಲ್ಲಿ Oscars ಪ್ರಶಸ್ತಿ ನೀಡುವ Dolby Theaterನ್ನು ನೋಡಿದೆವು. ಹಾಲಿವುಡ್‌ನ Walk of Fame ರಸ್ತೆಯನ್ನು ಸುತ್ತಿ ಅಲ್ಲಿ ಚೈನೀಸ್ ಥಿಯೇಟರ್‌ನಲ್ಲಿದ್ದ ಜಗತ್ಪ್ರಸಿದ್ಧ ಸಿನೇಮಾ ತಾರೆಯರ ಲೋಹದಲ್ಲಿ ಕೆತ್ತಿದ ಅವರ ಹೆಸರು, ಕೈ ಹಾಗೂ ಪಾದದ ಅಚ್ಚುಗಳನ್ನು ನೋಡಿದೆವು. ಬಳಿಕ Sunset Strip, Beverly Hills ವೀಕ್ಷಿಸಿ, ಊಟ ಮುಗಿಸಿ ಹೋಟೆಲ್ Radisson ಸೇರಿದೆವು.

ಮರುದಿನ ಉಪಾಹಾರದ ಬಳಿಕ ನಾವು ಅಲ್ಲಿಯ ವಿಶ್ವವಿಖ್ಯಾತ ëUniversal Studioí ನೋಡಲು ಹೋದೆವು. ಈ ಪ್ರದೇಶವು ವಿಶಾಲವಾಗಿದ್ದು ಹಲವಾರು ಥಿಯೇಟರ್‌ಗಳನ್ನು, Water Park, ಕ್ಯಾಂಟೀನ್, gift shop, ಪಾರ್ಕ್‌ಗಳನ್ನು ಒಳಗೊಂಡಿದೆ. ಈ studioದೊಳಗೆ ಒಮ್ಮೆ ಪ್ರವೇಶಿಸಿದರೆ ಇಡೀ ದಿನವನ್ನು ಕಳೆಯಬಹುದು. ಇಲ್ಲಿ Studio Tram Tour ವ್ಯವಸ್ಥೆ ಇದೆ. ಈ ಟ್ರಾಮ್ ಟೂರ್‌ನಲ್ಲಿ ಕುಳಿತುಕೊಂಡೇ ಸ್ಟುಡಿಯೋವನ್ನು ಪೂರ್ತಿಯಾಗಿ ನೋಡಬಹುದು. ಸಿನೇಮಾ ತಯಾರಿಸಲು ಬೇಕಾದ ಸಾಮಾಗ್ರಿಗಳು, ದೃಶ್ಯಗಳು ಇಲ್ಲಿ ಇದ್ದು ಕೃತಕ ಮಳೆ ಬರುವ ದೃಶ್ಯ, ಭೀಕರ ಪ್ರವಾಹದ ದೃಶ್ಯ, ರೈಲು ಹಾಗೂ ವಿಮಾನ ಅಪಘಾತದ ದೃಶ್ಯ ಇತ್ಯಾದಿಗಳನ್ನು ತೋರಿಸುತ್ತಾರೆ. ëRevenge of the mummyí, ëJurassic Park-The Ride, Shrek in 4D, Terminator 2 in 3 D ಮುಂತಾದ ಕುತೂಹಲಕರವಾದ ದೃಶ್ಯಗಳನ್ನು ತೋರಿಸು ತ್ತಾರೆ.ಇದೊಂದು ಸಿನಿಮಾ ಜಗತ್ತಿನ ಸಂಪೂರ್ಣ ಮಾಹಿತಿ ಕೇಂದ್ರ. ಇಡೀ ದಿನ Universal studioದಲ್ಲಿಯೇ ಸುತ್ತಾಡಿ ಊಟ ಮುಗಿಸಿ ಹೋಟೆಲ್ ಸೇರಿದೆವು.

ಮರುದಿನ ಬೆಳಗ್ಗೆ ಉಪಾಹಾರದ ಬಳಿಕ Los Angelesನಿಂದ 2 ಗಂಟೆ ವಿಮಾನ ಪ್ರಯಾಣ ಮಾಡಿ ëSan Franciscoíಗೆ ಬಂದೆವು. ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ City Tour ಮಾಡಿದ ಬಳಿಕ ಪ್ರಸಿದ್ಧ ëThe Golden Gate Bridgeí ನೋಡಲು ಹೋದೆವು. ಈ ಸೇತುವೆಯ ಉದ್ದ 8981 Feet, ಎತ್ತರ 946 Feet ಮತ್ತು ಅಗಲ 90 Feet ಇದೆ. ಈ ಸೇತುವೆಯ ನಿರ್ಮಾಣದ ಕೆಲಸ 1933ರಲ್ಲಿ ಪ್ರಾರಂಭವಾಗಿ 1937ರಲ್ಲಿ ಮುಗಿಯಿತು. ಈ ಸೇತುವೆಯ ಮೇಲಿನಿಂದ ಸಾಗುವ ವಾಹನಗಳ ದಟ್ಟಣೆ ತುಂಬಾ ಜಾಸ್ತಿ. ಸೈಕಲ್ ಸವಾರರಿಗೆ ಹಾಗೂ ಪಾದಚಾರಿಗಳಿಗೆ ಬದಿಯಲ್ಲಿ ಬೇರೆ ದಾರಿ ಇದೆ. ಈ ಸೇತುವೆಯನ್ನು ಹತ್ತಿರದಿಂದ ನೋಡುವ ಸಲುವಾಗಿ ಮತ್ತು ಅದರ ಮೇಲಿನಿಂದ ಪ್ರಯಾಣಿಸಬೇಕೆಂಬ ಆಸೆಯಿಂದ ನಾವು ಪ್ರತಿಯೊಬ್ಬ ಪ್ರವಾಸಿಯೂ ಪ್ರತ್ಯೇಕವಾಗಿ 1 ಡಾಲರ್ ಕೊಟ್ಟು ಸೇತುವೆಯ ಮೇಲಿನಿಂದ ಬಸ್ಸಿನಲ್ಲಿ ನಿಧಾನವಾಗಿ ನೋಡುತ್ತಾ ಬಂದೆವು. ಸೇತುವೆ ಮೇಲಿನಿಂದ ನೋಡಲು ಸಿಗುವ ದೃಶ್ಯ ಮರೆಯಲಾಗದ್ದು. ಸ್ಯಾನ್ ಫ್ರಾನ್ಸಿಸ್ಕೋ ನಗರ ವೀಕ್ಷಣೆಯಲ್ಲಿ ಬೀಚ್, ಬೆಟ್ಟದ




ಮೇಲಿನಿಂದ ಸೂರ್ಯ ಮುಳುಗುವ ದೃಶ್ಯ ಮುಂತಾದ ಅನೇಕ ಸುಂದರ ದೃಶ್ಯಗಳನ್ನು ನೋಡಿದೆವು. ಆ ದಿನದ ನಮ್ಮ ಟೂರಿನಲ್ಲಿ ನಮ್ಮ ಜೊತೆಗಿದ್ದ ಅಮೇರಿಕನ್ ಇಂಡಿಯನ್ ಲೋಕಲ್ ಗೈಡ್‌ನ ಇಂಗ್ಲೀಷ್ ಹಾಗೂ ಹಿಂದಿ ಭಾಷಾ ವೈಖರಿ ಮತ್ತು ವರ್ಣನೆಯ ಪರಿ ಅಮೋಘವಾಗಿತ್ತು.

ಪ್ರವಾಸದ ಕೊನೇ ದಿನ ಬೆಳಗ್ಗೆ ಟಿಫಿನ್ ಮುಗಿಸಿ ಬೆಂಗಳೂರಿಗೆ ವಾಪಾಸ್ ಹೊರಡುವ ಸಿದ್ಧತೆ ಮಾಡತೊಡಗಿದೆವು. ಪರಸ್ಪರ ವಿದಾಯ ಹೇಳುತ್ತಾ ನಮ್ಮ ಲಗೇಜಿನೊಂದಿಗೆ San Francisco ವಿಮಾನ ನಿಲ್ದಾಣಕ್ಕೆ ಬಂದೆವು. ಅಲ್ಲಿ ನಮ್ಮ ಟೂರ್ ಮೆನೇಜರ್ ನಮ್ಮನ್ನು ಬೀಳ್ಕೊಂಡು ಮುಂದೆ ಬೆಂಗಳೂರಿನಿಂದ ಬರುವ ಇನ್ನೊಂದು ಪ್ರವಾಸಿ ಟೀಮನ್ನು ಸೇರಿಕೊಳ್ಳಲು Los Angelesಗೆ ಪ್ರಯಾಣ ಬೆಳೆಸಿದರು. ನಾವು ಸಂಜೆ 4.45ಕ್ಕೆ ಸ್ಯಾನ್‌ಫ್ರಾನ್ಸಿಸ್ಕೋದಿಂದ ದುಬೈಗೆ ಹೊರಡುವ ಎಮಿರೇಟ್ಸ್ ಕಂಪನಿಯ ಡಬಲ್‌ಡೆಕ್ಕರ್ ಜಂಬೋ ವಿಮಾನವನ್ನು ಹತ್ತಿದೆವು. ವಿಮಾನದಲ್ಲಿ ಪ್ರತಿ ಸೀಟಿನಲ್ಲಿಯೂ T.V ಇದ್ದುದರಿಂದ ಸಮಯ ಕಳೆಯಲು ಅನುಕೂಲವಾಯಿತು. ನಿರಂತರ 14 ತಾಸುಗಳ ಹಾರಾಟದ ಬಳಿಕ ಮರುದಿನ ಸಾಯಂಕಾಲ 7.20ಕ್ಕೆ ದುಬೈ ಬಂದು ಸೇರಿದೆವು. ದಿಲ್ಲಿ ಹಾಗೂ ಮುಂಬೈಗೆ ಹೋಗುವ ನಮ್ಮ ಜೊತೆಗಿದ್ದ ಪ್ರವಾಸಿಗರು ದುಬ್ಯಾಯಿಂದ ಬೇರೆ ಬೇರೆ ವಿಮಾನಗಳಲ್ಲಿ ಅವರ ಊರಿಗೆ ಹೊರಟು ಹೋದರು. ನಾವು ರಾತ್ರಿ 9.30ಕ್ಕೆ ದುಬ್ಯಾಯಿಂದ ಹೊರಟು ಮರುದಿನ ಮುಂಜಾನೆ 3 ಗಂಟೆಗೆ ಬೆಂಗಳೂರು ತಲುಪಿದೆವು. ಅಮೇರಿಕದ ಈ ಸುದೀರ್ಘ ವಿಮಾನ ಪ್ರಯಾಣ ಇಡೀ ಪ್ರಪಂಚ ಸುತ್ತಿದ ಅನುಭವವನ್ನು ಕೊಟ್ಟಿದೆ.

ವಿದೇಶಗಳನ್ನು ಭೇಟಿ ನೀಡುವ ಭಾರತೀಯರಿಗೆ ಅಲ್ಲಿಯ ಪ್ರಸಿದ್ಧ ತಾಣಗಳಿಗಿಂತಲೂ ಮೊದಲು ವಿಸ್ಮಯ ಹುಟ್ಟಿಸುವುದು ಅಲ್ಲಿಯ ರಸ್ತೆ, ತಂಗುದಾಣ, ರೆಸ್ಟೋರೆಂಟುಗಳ ಸ್ವಚ್ಛತೆ. ಅದನ್ನು ಕಾಪಾಡಿಕೊಳ್ಳುವ ಅಲ್ಲಿಯ ಜನರ ಬದ್ಧತೆ, ಸಂಯಮಗಳೂ ಅನುಕರಣೀಯ. ನಾವೂ ನಮ್ಮ ಸುತ್ತಮುತ್ತ ಸ್ವಚ್ಛತೆಗೆ ಆದ್ಯತೆ ನೀಡೋಣ ಮತ್ತು ಅವರಂತೆಯೇ ಮುಂದುವರಿದ ದೇಶಗಳ ಸಾಲಿನಲ್ಲಿರಲು ಪ್ರಯತ್ನಿಸೋಣ.

(ಮುಗಿಯಿತು)

## ಕೊನೆಯ ದಿನ ಸ್ಥಾನಿಕ ಬ್ರಾಹ್ಮಣ ಸಮಾವೇಶ

■...1ನೇ ಪುಟದಿಂದ

ನಂತರ ಕಳೆದ ಸಮಾವೇಶದಲ್ಲಿ ಉಳಿಕೆಯಾದ ಹಣ ಹಾಗೂ ಅದರ ಬಡ್ಡಿಯನ್ನು ಈ ಸಮಾವೇಶ ನಡೆಸುವ ಪಡುಬಿದ್ರೆ ಸಂಘದ ಪದಾಧಿಕಾರಿಗಳಿಗೆ ಹಸ್ತಾಂತರಿಸಲಾಯಿತು. ಈ ಸಮಾವೇಶ ಹಾಗೂ ಋಕ್ ಸಂಹಿತ ಯಾಗದ ಯಶಸ್ಸಿಗೆ ಶ್ರಮಿಸಿದ ಶ್ರೀ ಕರುಣ್ ರಾವ್ ಬೆಳ್ಳೆ, ಬ್ರಹ್ಮಶ್ರೀ ವಾಗೀಶ ಶಾಸ್ತ್ರೀ, ಶ್ರೀ ಎಮ್.ಆರ್. ವಾಸುದೇವ್, ಮೊದಲಾದವರನ್ನು ಶ್ರೀ ಶ್ರೀ ಕೇಶವಾನಂದಭಾರತೀಯವರು ಶಾಲು, ಹಾರ ಹಾಗೂ ಅಭಿನಂದನಾ ಪತ್ರ ನೀಡಿ ಅಭಿನಂದಿಸಿದರು. ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರು ತಮ್ಮ ಶುಭನುಡಿಯಲ್ಲಿ ಸಮಾಜದ ಎಲ್ಲಾ ಸಂಘ ಸಂಸ್ಥೆಗಳು ಜೊತೆಗೂಡಿ ಇಂಥಹ ಪುಣ್ಯ ಕಾರ್ಯ ನಡೆಸಿದ್ದು ಸಮಾಜದ ಬೆಳವಣಿಗೆಯ ಧ್ಯೋತಕ. ನನ್ನ ತಂದೆ ದಿ| ದ್ವಿವೇದಿ ಸೀತಾರಾಮ ಶಾಸ್ತ್ರಿಯವರ ಜನ್ಮ ಶತಮಾನದ ಈ ವರ್ಷದಲ್ಲಿ ಇಂತಹ ಘನ ಕಾರ್ಯ ನಡೆದುದು ಒಂದು ಯೋಗ. ಈ ಎಂಟು ದಿನಗಳ ಧರ್ಮಾಚರಣೆಯ ಮೂಲಕ ನಮ್ಮಲ್ಲಿ ಬ್ರಾಹ್ಮಣ್ಯ ಜಾಗೃತಿಯಾಗಲಿ ಎಂದು ಹಾರೈಸಿದರು.

ಅಧ್ಯಕ್ಷೀಯ ಭಾಷಣ ಮಾಡಿದ ಶ್ರೀ ಎಂ.ಆರ್.ವಾಸುದೇವ್ ಪಡುಬಿದ್ರೆಯಲ್ಲಿ ನಡೆದ ಈ ಯಾಗಕ್ಕೆ ಸಹಕರಿಸಿದ ಎಲ್ಲರಿಗೆ ಧನ್ಯವಾದ ಹೇಳಿ ಯಾಗವು ಸಂಪೂರ್ಣ ಯಶಸ್ವಿಯಾಗಿದೆ. ಕೇವಲ 45 ದಿನಗಳ ತಯಾರಿಯಲ್ಲಿ ಇಷ್ಟು ದೊಡ್ಡ ಕೆಲಸವಾಗಿದೆ ಎಂದರೆ ಇದೊಂದು ಅದ್ಭುತ. ಇಂದು ಸ್ಥಾನಿಕರು ಎಲ್ಲಾ ಕ್ಷೇತ್ರಗಳಲ್ಲಿಯೂ ಮಿಂಚುತ್ತಿದ್ದಾರೆ.ಆದರೂ ಬ್ರಾಹ್ಮಣ್ಯವನ್ನು ಪಡೆಯಬೇಕೆಂಬ ತುಮುಲ ನಮ್ಮಲ್ಲಿ ಮೊದಲಿಗೆ ಇರಬೇಕೆಂದರು.

### ಶ್ರೀಗಳಿಂದ ಅನುಗ್ರಹ ಭಾಷಣ

ಎಡನೀರು ಮಠದ ಶ್ರೀ ಶ್ರೀ ಕೇಶವಾನಂದ ಭಾರತಿ ಶ್ರೀಗಳು ಕೇವಲ ಕಹಿಮದ್ದನ್ನೇ ಕೊಟ್ಟರೆ ಬಿಸಾಡುವ ಜನರೇ ಹೆಚ್ಚು. ಆ ಕಹಿಯನ್ನು ಸಿಹಿಯೊಂದಿಗೆ ಬೆರೆಸಿ ತಿನ್ನಿಸಿದಾಗ ಅದನ್ನು ಸ್ವೀಕರಿಸುತ್ತಾರೆ. ಆದ್ದರಿಂದ ಸ್ಥಾನಿಕರಿಗೆ ಸ್ಥಾನ ಹೋಗಿರಲಿ; ಆಡಳಿತ ಇಲ್ಲದಿರಲಿ- ವಿಶೇಷವಾದ ಧರ್ಮಾಸಕ್ತಿ ಇದೆ ಎನ್ನುವುದು ಇಂದು ಸಮಾಪನಗೊಂಡ ಈ ಯಾಗವೇ ಸಾಕ್ಷಿ. ಅಂತೆಯೇ ಈ ಸತ್ಕರ್ಮದಲ್ಲಿ ನಾವೂ ಪಾಲ್ಗೊಂಡಿದ್ದೇವೆ. ಸ್ಥಾನಿಕರಲ್ಲಿ ಶ್ರದ್ಧೆ, ಶಿಸ್ತು, ಪ್ರಾಮಾಣಿಕತೆ ಮೊದಲಿನಿಂದಲೂ ಬಂದಿರುವ ಬಳುವಳಿ. ಇದಕ್ಕೊಂದು ಎಂ.ಆರ್.ವಾಸುದೇವ್, ಜಗನ್ನಿವಾಸ ರಾವ್, ಜಗದಾಬಿರಾಮಸ್ವಾಮಿ ಮೊದಲಾದವರೇ ಉದಾಹರಣೆ. ಈ ಯಾಗ ಸಂಪನ್ನತೆಗೆ ಕಾರಣರಾದ ಎಲ್ಲರಿಗೆ, ಪಡುಬಿದ್ರೆ ಸಂಘಕ್ಕೆ, ನೆರೆದ ಎಲ್ಲಾ ಭಕ್ತ ಸಮುದಾಯಕ್ಕೆ ಶ್ರೀ ದೇವರ ಪರಿಪೂರ್ಣ ಅನುಗ್ರಹವಿರಲಿ. ಎಷ್ಟೇ ದೊಡ್ಡ ಹುದ್ದೆಯಲ್ಲಿ ಇದ್ದರೂ ಇಲ್ಲದಿದ್ದರೂ ನಮ್ಮತನ ಮರೆಯದೆ ಬ್ರಾಹ್ಮಣ್ಯದ ಭಾವನೆ ಉಳಿಕೆಯಾಗಿ ತಮ್ಮ ಶ್ರೇಯಸ್ಸಿಗೆ ಕಾರಣವಾಗಲಿ ಎಂದು ಶ್ರೀ ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದರು.

ಕೊನೆಯಲ್ಲಿ ಶ್ರೀ ಜಗನ್ನಿವಾಸರಾವ್ ಧನ್ಯವಾದ ಅರ್ಪಣೆ ಮಾಡಿದರು.

## ಉಡುಪಿ ಸಮಾವೇಶದಲ್ಲಿ ಉಳಿಕೆ ಹಣ ಹಸ್ತಾಂತರ



**2012ರಲ್ಲಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಶ್ರಯದಲ್ಲಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನಡೆದ ಎರಡು ದಿನದ ಸ್ಥಾನಿಕ ಸಮಾವೇಶವು ಬಹಳ ಅದ್ದೂರಿಯಿಂದ ನಡೆದಿದ್ದು; ಸಮಾವೇಶಕ್ಕೆ ಸಾಕಷ್ಟು ಹಣ ಸಂಗ್ರಹವೂ ಆಗಿತ್ತು. ಆಗಿನ ಸಮಾವೇಶ ಸಮಿತಿಯ ಪದಾಧಿಕಾರಿಗಳ ಖರ್ಚಿನ ದೃಷ್ಟಿಯ ಸೂಕ್ಷ್ಮತೆಯ ಕಾರಣದಿಂದ ಸುಮಾರು 3 ಲಕ್ಷ ರೂಗಳವರೆಗೆ ಉಳಿಕೆಯಾಗಿತ್ತು. ಇದೀಗ ಅದು ಬಡ್ಡಿ ಸೇರಿ 3,77,693 ರೂಗಳಾಗಿದ್ದು; ಈ ಹಣವನ್ನು ಎಲ್ಲರ ಸಹಮತದೊಂದಿಗೆ 2014ರ ಈ ಋಕ್ ಸಂಹಿತಾ ಯಾಗ ಸಮಿತಿಗೆ ನೀಡುವುದೆಂದು ತೀರ್ಮಾನಿಸಲಾಗಿತ್ತು. ಅದರಂತೆ ಋಕ್‌ಸಂಹಿತಾ ಯಾಗದ ಪೂರ್ಣಾಹುತಿಯ ದಿನ ಮಧ್ಯಾಹ್ನ ನಡೆದ ಸ್ಥಾನಿಕ ಸಮಾವೇಶದ ಸಮಾರಂಭದಲ್ಲಿ ಹಿಂದಿನ ಸಮಿತಿಯ ಪದಾಧಿಕಾರಿಗಳು ಜೊತೆಯಾಗಿ ಯಾಗ ಸಮಿತಿಗೆ ಈ ರೂ.3,77,693ಗಳ ಚೆಕ್ ಅನ್ನು ಪಡುಬಿದ್ರೆಯ ಯಾಗ ಸಮಿತಿಯ ಪದಾಧಿಕಾರಿಗಳಿಗೆ ಹಸ್ತಾಂತರಿಸಿದರು.**

**ಇದಕ್ಕೆ ಪೂರಕವಾಗಿ ಯಾಗ ಸಮಿತಿಯ ಪ್ರಾಯೋಜಕತ್ವದಲ್ಲಿ ಪಡುಬಿದ್ರೆಯ ಬಾಲಗಣಪತಿ-ಪ್ರಸನ್ನಪಾರ್ವತಿ ದೇವಳದ ಮುಂಭಾಗದಲ್ಲಿ ಸುಮಾರು 9 ಲಕ್ಷ ರೂ ವೆಚ್ಚದಲ್ಲಿ ನಿರ್ಮಿಸಿದ ಶಾಶ್ವತವಾದ ಭವ್ಯ ತಗಡು-ಚಪ್ಪರ ಹಾಗೂ ಸುಸಜ್ಜಿತ ವೇದಿಕೆಯನ್ನು ಹೆಬ್ಬೂರು ಶ್ರೀ ಕೋದಂಡಾಶ್ರಮ ಮಠದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳ ಮೂಲಕ ಯಾಗದ ಆರಂಭದ ದಿನದಂದು ಯಾಗ ನಡೆಯುವ ಶ್ರೀ ದೇವಸ್ಥಾನಕ್ಕೆ ಅರ್ಪಿಸಲಾಯಿತು.**

## ಋಕ್ ಸಂಹಿತಾ ಯಾಗ- ಎರಡು ಯಕ್ಷಗಾನ ಪ್ರದರ್ಶನಗಳು



ಪಡುಬಿದ್ರೆ ಋಕ್ ಸಂಹಿತಾ ಯಾಗದ ಸಾಂಸ್ಕೃತಿಕ ಕಾರ್ಯಕ್ರಮಗಳು ಭಕ್ತ ಬಾಂಧವರನ್ನು ರಂಜಿಸುವಲ್ಲಿ ಸಫಲವಾದವು. ಯಾಗದ ಮೊದಲ ದಿನ ನಮ್ಮ ಸಮಾಜದ ಪ್ರತಿಭಾನ್ವಿತ ಕಲಾವಿದರು ತೆಂಕುತಿಟ್ಟು ಯಕ್ಷಗಾನವನ್ನು ಪ್ರಸ್ತುತ ಪಡಿಸಿದರು. ವಿದ್ಯುನ್ಮತಿ ಕಲ್ಯಾಣ ಪ್ರಸಂಗದ ಆಯ್ದ ಭಾಗವನ್ನು ಕುಶಭೂಪಾಲ ವಿಜಯ ಎಂಬ ಶೀರ್ಷಿಕೆಯೊಂದಿಗೆ ಪ್ರದರ್ಶಿಸಲಾಯಿತು. ಹಿಮ್ಮೇಳದಲ್ಲಿ ಭಾಗವತರಾಗಿ ಶಶಿಧರ್ ಚಿತ್ರಾಪು ಮತ್ತು ಶ್ರೀಧರ್ ಹೆಬ್ಬಾರ್, ಚೆಂಡೆ ಮದ್ದಳೆಯಲ್ಲಿ ದೇವದಾಸ್ ಕೂಡ್ಲಿ ಮತ್ತು ದೇವಾನಂದ ಭಟ್ ಸಹಕರಿಸಿದರು. ಮುಮ್ಮೇಳದಲ್ಲಿ ಕುಶಭೂಪಾಲನಾಗಿ ಸಂಜಯ್ ಕುಮಾರ್ ಫಲಿಮಾರ್, ವನಪಾಲಕನಾಗಿ ಶ್ರೀಕಾಂತ್ ರಾವ್,ಚಿತ್ರಕೇತ ನಾಗಿ ಶುಭಾಂಜನ, ಚಿತ್ರವಾನನಾಗಿ ಅನಂತ ಪ್ರಜ್ವಲ್, ವೃತ್ರಜ್ವಾಲೆಯಾಗಿ ಅನುಭವಿ ಕಲಾವಿದ ಜಗದಾಭಿರಾಮ ಸ್ವಾಮಿ ಪಡುಬಿದ್ರಿ, ವಿದ್ಯುನ್ಮತಿಯಾಗಿ ಕು| ಅನುಶ್ರೀ ಹಳೆಯಂಗಡಿ, ಲವನಾಗಿ ಅನಿಲ್ ನೆಲ್ಲಿಕುಂಜ, ವಿಭೀಷಣನಾಗಿ ಶಬರೀಶ್ ಹೆಬ್ಬಾರ್, ಕಾಲಜಂಘನಾಗಿ ನಾಗರಾಜ್ ವರ್ಕಾಡಿ ಪಾತ್ರ ನಿರ್ವಹಿಸಿದರು. ಋಕ್ ಸಂಹಿತಾ ಯಾಗದ ಸಾಂಸ್ಕೃತಿಕ ಕಾರ್ಯಕ್ರಮ ತೆಂಕು ತಿಟ್ಟಿನ ಯಕ್ಷಗಾನದೊಂದಿಗೆ ಪ್ರಾರಂಭವಾಗಿ ಉತ್ತಮ ಆರಂಭವನ್ನೇ ಒದಗಿಸಿತು . ಸಮಾಜ ಬಾಂಧವರ ಪ್ರೋತ್ಸಾಹ ಕಲಾವಿದರಿಗೆ ಉತ್ತಮ ಪ್ರದರ್ಶನ ನೀಡಲು ಸಹಕಾರಿಯಾಯಿತು.

**-ನಾಗರಾಜರಾವ್ ವರ್ಕಾಡಿ**

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

**ಫೋನ್ : 2556536 (R), 2555466 (O), Mobile : 9845149521**

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ| ಎಸ್. ಜನಾರ್ದನ್ ರಾವ್**

ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ದಿನಾಂಕ 31-10-2014ರಂದು ಋಕ್ ಸಂಹಿತ ಯಾಗದಲ್ಲಿ ಉಡುಪಿ ಶ್ರೀ ಕುಂಜಿಬೆಟ್ಟು ಶ್ರೀ ಸ್ಥಾನಿಕ ದ್ರಾವಡ ಬ್ರಾಹ್ಮಣ ಸಂಘದ ಆಶ್ರಯದಲ್ಲಿ ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರಿಂದ 'ಜಾಂಬವತಿ ಕಲ್ಯಾಣ' ಯಕ್ಷಗಾನ ಬಯಲಾಟವು ನೆರವೇರಿತು.

ಸಭಾ ಲಕ್ಷಣದಲ್ಲಿ ಕೋಡಂಗಿಯಾಗಿ ಸ್ಕಂದ ವಿಶ್ವನಾಥ ಶ್ಯಾನುಭಾಗ್, ಹಾಗೂ ಬಾಲಗೋಪಾಲನಾಗಿ ಆದಿತ್ಯ ಸಂತೋಷ್ ರಾವ್ ಮಿಂಚಿದರೆ, ಸಂತೋಷ್ ರಾವ್ ಸತ್ರಾರ್ಜಿತನಾಗಿ ಒಡ್ಡೋಲಗಸ್ಥರಾದರು. ಕಾರ್ತಿಕೇಯ ಕೃಷ್ಣ ಹಾಗೂ ಕಾರ್ತಿಕ್ ಸಿ ವನಪಾಲಕರಾಗಿ ರಂಜಿಸಿದರು. ಸಾಂಪ್ರದಾಯಿಕ ಕಿರಾತಕನಾಗಿ ಕಲ್ಮಂಜೆ ವಾಗೀಶರಾವ್ ತಮ್ಮ ಛಾಪು ತೋರಿದರೆ, ಮುಂಡು ವೇಷದಲ್ಲಿ ಪ್ರಸೇನನಾಗಿ ಮುಡಿಗುಟ್ಟಿದ್ದು ಕಲ್ಮಂಜೆ ವ್ಯಾಸರಾವ್. ನಾರದನಾಗಿ ಅಚ್ಚುಕಟ್ಟಿನ ವೇಶದಲ್ಲಿ ಆಕಾಶ್ ದೂರು ಹೇಳಿದರೆ, ಬಲರಾಮನಾಗಿ ಮಟ್ಟು ಕೃಷ್ಣಕುಮಾರ್ ರಾವ್, ಕೃಷ್ಣನಾಗಿ ವಾಗೀಶ ಟಿ ನಿಟ್ಟೂರು ತಮ್ಮ ಮಾತುಗಾರಿಕೆ ಹಾಗೂ ಕುಣಿತಗಳಿಂದ ರಂಜನೆ ಒದಗಿಸಿದರು. ಮೃಗರಾಜನಾಗಿ ಅಜಿತ್ ಕುಮಾರ್ ಪಾತ್ರೋಚಿತ ಗಾಭೀರ್ಯ ತೋರಿದರೆ, ಜಾಂಬವನಾಗಿ ವಿಶ್ವನಾಥ ಶ್ಯಾನುಭಾಗ್ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದರು. ಎರಡನೇ ಕೃಷ್ಣನಾಗಿ ಕು| ವೃಂದಾ ಕೆ ರಾವ್ ಹಾಗೂ ಜಾಂಬವತಿಯಾಗಿ ಶುಭಾಂಜನಾ ಭಟ್ ಇವರೆಲ್ಲರಿಗೆ ಕಡಿಮೆ ಇಲ್ಲದಂತೆ ಅತ್ಯುತ್ತಮ ಪ್ರದರ್ಶನ ನೀಡಿದರು. ಶ್ರೀ ರಾಮನಾಗಿ ಪ್ರತ್ಯಕ್ಷಗೊಂಡ ಅರವಿಂದ ಕುಮಾರ್ ಯಥೋಚಿತ ಮಾತುಗಳಿಂದ ಜಾಂಬವನಿಗೆ ಸಾಂತ್ವನ ಹೇಳಿದರು.

ಭಾಗವತರಾಗಿ ಮೊದಲು ಶ್ರೀ ಪ್ರವೀಣ ಕುಮಾರ್ ನಂತರ ಶ್ರೀ ಚಂದ್ರಕಾಂತ ರಾವ್ ಮೂಡುಬೆಳ್ಳೆ ಮದ್ದಳೆ ವಾದನದಲ್ಲಿ ಶ್ರೀ ದೇವದಾಸ ಕೂಡ್ಲಿ, ಚೆಂಡೆ ವಾದನದಲ್ಲಿ ಶ್ರೀ ಶಿವಾನಂದ ಕೋಟ ಅತ್ಯುತ್ತಮ ಹಿಮ್ಮೇಳ ಒದಗಿಸಿಕೊಟ್ಟರು. ಒಟ್ಟಿನಲ್ಲಿ ಶ್ರೀ ದೇವದಾಸ ಕೂಡ್ಲಿಯವರ ಸಾರ್ಥಕ ನಿರ್ದೇಶನದಲ್ಲಿ ನಡೆದ ಈ ಬಡಗು ಯಕ್ಷಗಾನವು ನಮ್ಮ ಸಮಾಜಕ್ಕೆ ಹಿಂದಿನಿಂದಲೂ ಬಂದ ಬಳುವಳಿ ಎಂಬುವುದನ್ನು ಈ ಪ್ರದರ್ಶನದ ಮೂಲಕ ತೋರಿಸಿಕೊಟ್ಟಿತು.

**-ಅ ರಾ ಪಡುಬಿದ್ರೆ**

# ವೈದ್ಯಕೀಯ ವೇದಿಕೆ-ಆರೋಗ್ಯ ಮಾಹಿತಿ

ಡಾ। ವೈ. ಸುದರ್ಶನ ರಾವ್



**ಪ್ರಶ್ನೆ: ದುಶ್ಚಟಗಳು ಮತ್ತು ನಮ್ಮ ಆರೋಗ್ಯ**

(ಮುಂದುವರಿಯುವುದು)

ಮಾದಕ ದ್ರವ್ಯಗಳ ಸೇವನೆಯು ಗುಟ್ಟಾಗಿ ಬೆಳೆಯುತ್ತಿರುವ ಒಂದು ಪಿಡುಗು ಹಾಗೂ ಇದರ ದುಷ್ಪರಿಣಾಮಗಳು ತಂಬಾಕು ಹಾಗೂ ಮದ್ಯಸೇವನೆಗಿಂತಲೂ ಭೀಕರವಾಗಿವೆ. ಹದಿಹರೆಯದ ಯುವಕ ಯುವತಿಯರಲ್ಲಿ ಈ ದುಶ್ಚಟ ಜಾಸ್ತಿ. ಈ ಲೇಖನದ ಮೊದಲಿನಲ್ಲಿ ವಿವರಿಸಿದ ದುಶ್ಚಟಗಳಿಗೆ ಬಲಿಯಾಗುವ ಕಾರಣಗಳಲ್ಲಿ ಈ ಚಟಕ್ಕೆ ಅನ್ವಯವಾಗುವ ಕಾರಣಗಳು ಕಡಿಮೆ ಇವೆ ಹಾಗೂ ಗಾಂಜಾ, ಹಶೀಶ್, ಅಫೀಮ್, ಮರಿಜುವಾನಾ, ಕೊಕೈನ್ ಇತ್ಯಾದಿ ರೂಪಗಳಲ್ಲಿ ಈ ಮಾದಕ ದ್ರವ್ಯಗಳನ್ನು ಧಂಧೆಕೋರರು ಸಕ್ರಿಯವಾಗಿ ಮಾರಾಟ ಮಾಡುವುದೇ ಈ ಪಿಡುಗು ಹೆಚ್ಚಲು ಕಾರಣವಾಗಿದೆ.

ಮಾದಕ ದ್ರವ್ಯಗಳು ನೇರವಾಗಿ ಮೆದುಳು ಹಾಗೂ ನರಮಂಡಲ ಮತ್ತು ಹೃದಯಕ್ಕೆ ಹಾನಿಯುಂಟು ಮಾಡುತ್ತವೆ. ಅಪಸ್ಮಾರ, ಪಾರ್ಶ್ವವಾಯು, ಮೆದುಳಿನಲ್ಲಿ ರಕ್ತಸ್ರಾವ, ಹೃದಯಾಘಾತ, ಹೃದಯದ ಕಾರ್ಯಕ್ಷಮತೆ ಕಡಿಮೆಯಾಗುವುದು, ಶ್ವಾಸಕೋಶದಲ್ಲಿ ನೀರು ತುಂಬುವುದು ಇತ್ಯಾದಿ ಮಾರಣಾಂತಿಕ ಖಾಯಿಲೆಗಳು ಬರುತ್ತದೆ. ಮಾದಕ ದ್ರವ್ಯಗಳ ವ್ಯಸನಿಗಳಿಗೆ ರೋಗ ನಿರೋಧಕ ಶಕ್ತಿ ಕಡಿಮೆಯಾಗುವುದರಿಂದ ಸಾಮಾನ್ಯವಾಗಿ ನಮ್ಮನ್ನು ಕಾಡದ ಮೀಣಿ ಜೀವಿಗಳು ಇವರ ದೇಹವನ್ನು ಪ್ರವೇಶಿಸಿ ಕಾಯಿಲೆ ತರಬಹುದು. ಮಾದಕ ದ್ರವ್ಯವ್ಯಸನಿಗಳು ಈ ದ್ರವ್ಯಗಳನ್ನು ಚುಚ್ಚುಮದ್ದಿನ ರೂಪದಲ್ಲಿ ಸೇವಿಸುವುದರಿಂದ ಹಾಗು ಮೂರು ನಾಲ್ಕುಜನ ವ್ಯಸನಿಗಳು ಒಂದೇ ಸೂಜಿಯಲ್ಲಿರುವ ಔಷಧವನ್ನು ಹಂಚಿಕೊಂಡು ಚುಚ್ಚಿಕೊಳ್ಳುವುದರಿಂದ ಒಬ್ಬರಿಗೆ ಇರುವ ಸೂಜಿಯ ಮುಖಾಂತರ ಹರಡುವ ಖಾಯಿಲೆಗಳಾದ ಏಯ್ಡ್ಸ್ ಹಾಗೂ ಹೆಪಟೈಟಿಸ್ ಬಿ ಖಾಯಿಲೆಗಳು ಇನ್ನೊಬ್ಬನಿಗೆ ಹರಡುತ್ತದೆ. ಈ ಮಾದಕ ದ್ರವ್ಯಗಳನ್ನು ಸೇವಿಸುವುದು ಒಮ್ಮೆ ಅಭ್ಯಾಸವಾದ ಮೇಲೆ ಆ ದ್ರವ್ಯವನ್ನು ಸೇವಿಸದಿದ್ದರೆ ವ್ಯಸನಿಗೆ ಎದೆ ಬಡಬಡನೆ ಹೊಡೆದು ಕೊಳ್ಳುವುದು, ಕೈಕಾಲುಗಳಲ್ಲಿ ನಡುಕ, ಹೆದರಿಕೆ, ಹೇಗಾದರೂ ಮಾಡಿ ಆ ದ್ರವ್ಯವನ್ನು ಸೇವಿಸಲೇಬೇಕೆಂಬ ತುಡಿತವಾಗುವುದೆಲ್ಲಾ ಎಷ್ಟು ತೀವ್ರವಾಗುತ್ತದೆಂದರೆ ಅದಕ್ಕಾಗಿ ಅವರಿಂದ ಎಂತಹಾ ನಾಚಿಕೆಗೇಡಿನ ಕೆಲಸವನ್ನು ಮಾಡಲು ಪ್ರೇರೇಪಿಸುತ್ತದೆ. ಇದೇ ತುಡಿತದಿಂದಾಗಿ ಈ ವ್ಯಸನಿಗಳು ಈ ದ್ರವ್ಯವನ್ನು ಅಧಿಕ ಪ್ರಮಾಣದಲ್ಲಿ ಸೇವಿಸಿ ಮರಣ ಹೊಂದುವುದುಂಟು.

ಅನೈತಿಕ ಲೈಂಗಿಕ ಸಂಪರ್ಕ ಅನಾದಿ ಕಾಲದಿಂದ ಮನುಷ್ಯನಿಗೆ ಇರುವ ಚಟ. ಶತಶತಮಾನಗಳಿಂದಲೂ ಪ್ರಂಪಚದಾದ್ಯಂತ ಇದ್ದ ಎಲ್ಲಾ ನಾಗರಿಕ ಸಮಾಜಗಳು ಇದನ್ನು ಕೆಟ್ಟದೆಂದು ಸಾರಿ ಹೇಳುತ್ತಾ ಬಂದಿದ್ದರೂ ಇನ್ನೂ ಜನರು ಈ ಚಟಕ್ಕೆ ಬಲಿಬೀಳುತ್ತಲೇ ಇದ್ದಾರೆ. ಈ ಚಟದಿಂದ ಬರುವ ಖಾಯಿಲೆಗಳನ್ನು ಗುಹ್ಯರೋಗಗಳೆಂದು ಕರೆಯುತ್ತಾರೆ. ಈ ಗುಹ್ಯರೋಗಗಳಲ್ಲಿ ಸಿಫಿಲಿಸ್ ಎಂಬ ಖಾಯಿಲೆ ತುಂಬಾ ಹಳೆಯದು. ಲೈಂಗಿಕ ಸಂಪರ್ಕದಿಂದ ಬರುವ ಈ ಖಾಯಿಲೆಯು, ದೇಹದ ಪ್ರತಿಯೊಂದು ಅಂಗವನ್ನು ಹಾಳುಗೆಡಹಿ ಕೊಲ್ಲುವ ಸಾಮರ್ಥ್ಯ ಹೊಂದಿದೆ . ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಪೆನಿಸಿಲಿನ್ ಎಂಬ ಔಷಧಿಯನ್ನು ಕಂಡು ಹಿಡಿಯುವ ತನಕ ರಾಜ ಮಹಾರಾಜರುಗಳನ್ನೂ ಸೇರಿಸಿ ಲಕ್ಷಾಂತರ ಜನರು ಈ ಕಾಯಿಲೆಗೆ ಬಲಿಯಾಗಿದ್ದಾರೆ. ಶಾಂಕರಾಯ್ಡ್, ಗ್ರಾನುಲೋಮಾವೇನೇರಿಯಂ, ಗೊನೋರಿಯಾ ಇವು ಇನ್ನಿತರ ಗುಹ್ಯ ಕಾಯಿಲೆಗಳು. ಹೆಪಟೈಟಿಸ್ ಬಿ ಹಾಗೂ ಹೆಪಟೈಟಿಸ್ ಸಿ ಇವೆರಡು ಲೈಂಗಿಕ ಸಂಪರ್ಕದಿಂದ ಬಂದು ಪಿತ್ತ ಜನಕಾಂಗವನ್ನು ಹಾಳುಗೆಡಹುವ ಖಾಯಿಲೆಗಳು. ಹರ್ಪಿಸ್ಸಿಂಪ್ಲೆಕ್ಸ್ ಹಾಗೂ ಪಾಪಿಲ್ಲೋಮಾ ವೈರಸ್‌ಗಳು ಲೈಂಗಿಕ ಸಂಪರ್ಕದಿಂದ ಅಂಟಿಕೊಡು ಕ್ಯಾನ್ಸರ್ ಖಾಯಿಲೆಗಳನ್ನು ತರುವ ವೈರಸ್‌ಗಳು. ಈ ಖಾಯಿಲೆಗಳ ಪಟ್ಟಿಯನ್ನು ಕಳೆದ ಶತಮಾನದ ಅಂತ್ಯದಲ್ಲಿ ಸೇರಿಕೊಂಡು ಲಕ್ಷಾಂತರ ಜನರನ್ನು ಈಗಾಗಲೇ ಬಲಿ ತೆಗೆದುಕೊಂಡಿರುವ ಖಾಯಿಲೆಯೆಂದರೆ ಏಡ್ಸ್. ಇನ್ನೂ ಔಷಧ ಕಂಡು ಹಿಡಿಯಲಾಗದ ಖಾಯಿಲೆಯಾದ ಖಾಯಿಲೆ ಲೈಂಗಿಕ ಜೀವನದಲ್ಲಿ ನಿಷ್ಠೆ ದ್ರೋಹಕ್ಕೆ ತೆರುವ ಬೆಲೆ ಎಷ್ಟಾದೀತು ಎಂಬುದಕ್ಕೆ ಉದಾಹರಣೆ ಮಾತ್ರವಲ್ಲ ಖಾಯಿಲೆಯೊಂದನ್ನು ಗುಣಪಡಿಸಿ ಕೊಳ್ಳುವಲ್ಲಿ ವೈಜ್ಞಾನಿಕ ಯುಗದಲ್ಲೂ ನಮಗಿರುವ ಇತಿಮಿತಿಯನ್ನು ಬೆರಳು ತೋರಿಸುತ್ತಾ ಕಾಯಿಲೆ ಬಂದ ಮೇಲೆ ಗುಣಪಡಿಸಿಕೊಳ್ಳುವುದಕ್ಕಿಂತಲೂ ಖಾಯಿಲೆ ಬಾರದಂತೆ ಜೀವನ ಸಾಗಿಸುವುದರ ಮಹತ್ವವನ್ನು ಸಾರಿ ಹೇಳುತ್ತಿದೆ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322**

# ಪಡುಬಿದ್ರಿಯಲ್ಲಿ ವೈದಿಕ ಶಿಬಿರ



ಪಡುಬಿದ್ರಿ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಬ್ರಾಹ್ಮಣ ವಟುಗಳಿಗಾಗಿ ಉಚಿತ ವೈದಿಕ ಶಿಬಿರವು ಪಾವಂಜೆ ಶ್ರೀ ವಾಗೀಶ ಶಾಸ್ತ್ರಿಗಳ ನಿರ್ದೇಶನದಲ್ಲಿ ಹೆಜಮಾಡಿ ಕೃಷ್ಣ ಭಟ್ಟರ ನೇತೃತ್ವದಲ್ಲಿ ಅಕ್ಟೋಬರ್ ತಾ.05 ರಿಂದ 12 ರವರೆಗೆ ನಡೆಯಿತು. ವಟುಗಳಿಗೆ ಜಪ-ತಪ, ನಿತ್ಯಾನುಷ್ಠಾನ, ದೇವಪೂಜಾ ವಿಧಿಗಳನ್ನು ಶಿಬಿರದಲ್ಲಿ ಕಲಿಸಲಾಯಿತು. ದೇವಸ್ಥಾನದ ಅರ್ಚಕ ಶ್ರೀ ಗಣೇಶ ಭಟ್, ಆಡಳಿತ ಸಮಿತಿ ಸದಸ್ಯರಾದ ಶ್ರೀ.ಎಂ.ಕೆ. ದಿವಾಕರ ರಾವ್, ಶ್ರೀ ಸುಧಾಕರ ಬೆಳ್ಳೆ. ಸಹಕಾರ ನೀಡಿದರು. ತಾ.12 ರಂದು ಮಧ್ಯಾಹ್ನ ನಡೆದ ಶಿಬಿರದ ಸಮಾರೋಪ ಸಮಾರಂಭದಲ್ಲಿ ದೇವಸ್ಥಾನದ ಆಡಳಿತ ಮೊಕ್ತೇಸರ ಶ್ರೀ ಬಿ. ಜಯರಾಮ ರಾವ್, ಆಡಳಿತ ಸಮಿತಿ ಸದಸ್ಯರಾದ ಶ್ರೀ ಎಂ. ಕೆ. ಮೋಹನ್ ರಾವ್ ಹಾಗೂ ಶ್ರೀ ವಾಸುದೇವರಾಯರು ಸಮಯೋಚಿತವಾಗಿ ಮಾತನಾಡಿ ಶಿಬಿರಾರ್ಥಿಗಳಿಗೆ ಸಲಹೆಗಳನ್ನು ನೀಡಿದರು.

## "ಸ್ಥಾನಿಕ ವೃಕ್ಷ" ರಚನೆ : ಸ್ಥಾನಿಕ ಸಮಾಜ ಬಾಂಧವರಲ್ಲಿ ನಿವೇದನೆ

ಸ್ಥಾನಿಕ ಬ್ರಾಹ್ಮಣರು ಸಂಖ್ಯೆಯಲ್ಲಿ ಒಂದು ಸಣ್ಣ ಜನಾಂಗವಾಗಿದ್ದರೂ, ಪ್ರಸ್ತುತ ದೇಶಾದ್ಯಂತ ಅಲ್ಲದೆ ವಿದೇಶಗಳಲ್ಲೂ ಚೆಲ್ಲಿಹೋಗಿರುವುದರಿಂದ ಈ ಜನಾಂಗದ ಒಟ್ಟಾರೆ ವಿವರಗಳನ್ನು ಸಂಗ್ರಹಿಸಿಡುವ ಯಾವುದೇ ದಾಖಲೆ ಲಭ್ಯವಾಗುತ್ತಿಲ್ಲ. ಇತ್ತೀಚೆಗೆ ಎಲ್ಲ ಸ್ತರಗಳಲ್ಲಿ ಗಣಕೀಕರಣ (Computer Technology) ವ್ಯಾಪಾಕವಾಗಿ ಬಳಕೆಯಲ್ಲಿ ಬಂದ ಕಾರಣ ಹಾಗೂ ಬಹಳಷ್ಟು ಮಂದಿಗೆ ಗಣಕೀಕರಣ ವಿಭಾಗದಲ್ಲಿ ಅಪಾರವಾಗಿ ಉದ್ಯೋಗಾವಕಾಶ ಲಭಿಸಿರುತ್ತಾ ಇರುವುದರಿಂದ ಸ್ಥಾನಿಕ ಜನಾಂಗದವರು ದೇಶ ವಿದೇಶಗಳಲ್ಲಿ ಪಸರಿಸಿರುತ್ತಾರೆ. ಹಾಗಾಗಿ ಸ್ಥಾನಿಕ ಜನಾಂಗದ ವಿವರಗಳನ್ನು ಒದಗಿಸುವ ಖಚಿತ ದಾಖಲೆಯೂ ಕಾಣುತ್ತಿಲ್ಲ. ಪರಸ್ಪರ ತಿಳುವಳಿಕೆ ಹಾಗೂ ಸಂವಹನವೂ ಕೌಟುಂಬಿಕ ನೆಲೆಯಲ್ಲಿ ಕುಟುಂಬದೊಳಗಿನ ಸದಸ್ಯರು ಹಾಗೂ ಸಮೀಪ ಸಂಬಂಧಿಗಳಲ್ಲಿ ಮಾತ್ರ ಸಾಧ್ಯವಾಗಿದೆ. ದೂರದ ಸ್ಥಳಗಳಿಗೆ ವಲಸೆ ಹೋಗಿ ನೆಲೆಸಿರುವ ಸಮಾಜ ಬಾಂಧವರೊಳಗಿನ ಸಂವಹನಕ್ಕೂ ಒಂದು ಮಾಧ್ಯಮ ಇಲ್ಲವಾಗಿದೆ.

ಈಗ ಕಾಲ ತೀವ್ರ ವೇಗದಲ್ಲಿ ಬದಲಾಗುತ್ತಿದೆ. "ಸ್ಥಾನಿಕ ವಂಶವೃಕ್ಷ"ವನ್ನು ಬರೆಯಲು ಕಾಲ ಹತ್ತಿರವಾಗಿದೆ. ಅದು ಸಮಾಜದ ತುರ್ತು ಅಗತ್ಯವೂ ಆಗಿದೆ. ಅಜ್ಜ-ಮುತ್ತಜ್ಜರಿಂದ ಹಿಡಿದು ಮೊಮ್ಮಕ್ಕಳು-ಮರಿಮಕ್ಕಳವರೆಗಿನ ಸಾಧ್ಯವಾದಷ್ಟೂ ಆಳ ವಿವರಣೆ/ಬರವಣಿಗೆ ಮಾಡುವ ಅಗತ್ಯ ಹೆಚ್ಚಾಗಿದೆ. ಸ್ಥಾನಿಕ ಸಮಾಜವೇ ಒಂದು ಒಟ್ಟು ಸಮುದಾಯವಾಗಿ ಆ ಸಮುದಾಯದ ವಂಶವೃಕ್ಷ ಸಿದ್ಧವಾಗಬೇಕಾಗಿದೆ. ಇದು ಇಂದಿನ ಹಾಗೂ ಮುಂದಿನ ಸ್ಥಾನಿಕ ಜನಾಂಗಗಳಿಗೆ ಅತ್ಯುಪಯುಕ್ತ ಮಾರ್ಗದರ್ಶಿಯಾಗಲಿದೆ.

ಅದಕ್ಕಾಗಿ ಈ ಯೋಜನೆಯ ಸ್ಪಷ್ಟ ರೂಪುರೇಖೆ ನಿರ್ಮಿಸಲು ಸಹಕರಿಸಿ; ದೇಶದ ನಾನಾ ಕಡೆ ಪಸರಿಸಿರುವ ನಮ್ಮ ಸಮಾಜದ ಆದಷ್ಟು ಹೆಚ್ಚು ಬಂಧುಬಾಂಧವರನ್ನು ಈ ಯೋಜನೆಯಲ್ಲಿ ತೊಡಗಿಸುವುದು ನಮ್ಮ ಉದ್ದೇಶವಾಗಿದೆ. ನೀವೂ ಕೈಜೋಡಿಸಿ. ನಿಮ್ಮ ಸಲಹೆಗಳನ್ನು ನೀಡಿ.

**ಶಂಕರನಾರಾಯಣ ರಾವ್ ಕರ್ವಾಲು**

Flat. No d-301, d-Block, ETA garden Apartments,
Near Binny Mills, Magadi Road, Bangalore-560023
E-mail: sthanikavrakshn @ gmail.com Mobile : 9449958151.

## ನಿಧನ

### ಶ್ರೀನಿವಾಸರಾವ್ ಕಟಪಾಡಿ

ಕಟಪಾಡಿ ಮೂಡಬೆಟ್ಟು ಸರಕಾರಿ ಗುಡ್ಡೆಯ ನಿವಾಸಿ ಶ್ರೀನಿವಾಸರಾಯರು(82ವರ್ಷ) ದಿನಾಂಕ 23-10-2014ರಂದು ಸ್ವಗೃಹದಲ್ಲಿ ನಿಧನರಾದರು. ಮೃತರು ಪತ್ನಿ ಓರ್ವ ಪುತ್ರ ಇಬ್ಬರು ಪುತ್ರಿಯರ ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ಸರಸ್ವತಿ ವಿ ರಾವ್

ಮುಂಬೈ ಘಾಟ್‌ಕೋಪರ್ ನಿವಾಸಿ ಬೆಳ್ಳೆ ಶ್ರೀ ವಾಸುದೇವರಾಯರ ಧರ್ಮಪತ್ನಿ ಸರಸ್ವತಿ ವಿ ರಾವ್ ದಿನಾಂಕ 26-10-2014ರಂದು ಮುಂಬೈಯ ಸ್ವಗೃಹದಲ್ಲಿ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ಟಿ. ಬಾಬುರಾಯ ಶ್ಯಾನುಭಾಗ್

ಮಂದಾರ್ತಿ ಸಹಕಾರ ಸೇವಾ ಸಂಘದಲ್ಲಿ 40 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ, ಪ್ರಧಾನ ವ್ಯವಸ್ಥಾಪಕರಾಗಿ ನಿವೃತ್ತರಾಗಿದ್ದ ಮಂದಾರ್ತಿ ತಂತ್ರಾಡಿ ಬಾಬುರಾಯ ಶ್ಯಾನುಭಾಗ್ (78) ಅಕ್ಟೋಬರ್ 19ರಂದು ನಿಧನ ಹೊಂದಿದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಮೂವರು ಪುತ್ರಿಯರನ್ನು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ಇಂದಿರಾ ಜನಾರ್ದನ್ ರಾವ್

ಮಂದಾರ್ತಿ ತಂತ್ರಾಡಿ ಎಮ್.ಜನಾರ್ದನ ರಾವ್‌ರವರ ಪತ್ನಿ ಇಂದಿರಾ ಜನಾರ್ದನ ರಾವ್ (73) ಅಕ್ಟೋಬರ್ 17ರಂದು ನಿಧನರಾದರು. ಅವರು ಪತಿ, ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ಸರಸ್ವತಿಯಮ್ಮ

ಚಿಟ್ಪಾಡಿ ದಿ। ಶ್ರೀನಿವಾಸರಾಯರ ಧರ್ಮಪತ್ನಿ ಸರಸ್ವತಿಯಮ್ಮ (94) ಇವರು ಅಲ್ಪಕಾಲದ ಅಸೌಖ್ಯದಿಂದ ಉಡುಪಿಯ ಖಾಸಗಿ ಆಸ್ಪತ್ರೆಯಲ್ಲಿ ನವಂಬರ್ 12ರಂದು ನಿಧನರಾದರು. ಮೃತರು ಮಂಗಳೂರಿನ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾವ್ (ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಮಾಜಿ ಅಧ್ಯಕ್ಷರು) ಸಹಿತ ಮೂವರು ಪುತ್ರರು, ಐವರು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

## ವರ ಬೇಕಾಗಿದ್ದಾರೆ

**B.E, ಬೆಂಗಳೂರಿನಲ್ಲಿ ಟಿ.ಸಿ.ಎಸ್ ಕಂಪೆನಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಉದ್ಯೋಗದಲ್ಲಿರುವ 24 ವರ್ಷ, ಎತ್ತರ 5.2" ಬಿಳಿ ಬಣ್ಣ, ಭಾರದ್ವಾಜ ಗೋತ್ರ, ಕುಂಭ ರಾಶಿ, ಶತಭಿಷಾ ನಕ್ಷತ್ರದ ಸುಸಂಸ್ಕೃತ ಹುಡುಗಿಗೆ 30 ವರ್ಷದೊಳಗಿನ B.E, ಬೆಂಗಳೂರಿನಲ್ಲಿ ಉದ್ಯೋಗದಲ್ಲಿರುವ ಹುಡುಗ ಬೇಕಾಗಿದ್ದಾರೆ.**

ವಿಚಾರಿಸಿರಿ : 9535371050

# ಬಣ್ಣದ ಸಕ್ಕಟ್ಟು ಪ್ರಶಸ್ತಿ ಪ್ರದಾನ ಸಮಾರಂಭ

ಬಣ್ಣದ ಸಕ್ಕಟ್ಟು ಲಕ್ಷ್ಮೀನಾರಾಯಣಯ್ಯ ಪ್ರತಿಷ್ಠಾನ (ರಿ) ಸೌಕೂರು ವತಿಯಿಂದ ದಿನಾಂಕ 02-11-2014ರಂದು ಅವರ ಹೆಸರಿನಲ್ಲಿ ಸ್ಥಾಪಿತವಾದ ಯಕ್ಷದಕ್ಷ ಸಕ್ಕಟ್ಟು ಪ್ರಶಸ್ತಿಯನ್ನು ಈ ವರ್ಷ ಹಿರಿಯ ಭಾಗವತ, ಗಮಕಿ ನೀಲಾವರ ಲಕ್ಷ್ಮೀನಾರಾಯಣಯ್ಯನವರಿಗೆ ನೀಡಲಾಯಿತು. ಈಗ 90ರ ಹರೆಯದಲ್ಲಿರುವ ವಯೋವೃದ್ಧರೂ ಜ್ಞಾನವೃದ್ಧರೂ, ಬಡಗುತಿಟ್ಟಿನ ಹೆಸರಾಂತ ಭಾಗವತರೂ ಆಗಿರುವ ನೀಲಾವರ ರಾಮಕೃಷ್ಣಯ್ಯನವರ ಸಹೋದರರೂ ಆಗಿರುವ ಶ್ರೀ ನೀಲಾವರ ಲಕ್ಷ್ಮೀನಾರಾಯಣಯ್ಯನವರು ತಮ್ಮ ತಂದೆ ದಿ| ಸೋಮೇಶಯ್ಯನವರಿಂದ ಕಾವ್ಯವಾಚನ, ಅಣ್ಣ ದಿ| ರಾಮಕೃಷ್ಣಯ್ಯನವರಿಂದ ಯಕ್ಷಗಾನ ಭಾಗವತಿಕೆ ಜೊತೆಗೆ ಸಂಗೀತ, ಗಮಕ ಮೊದಲಾದುವುಗಳನ್ನು ಸತತ ಅಧ್ಯಯನ ಮಾಡಿ ಅದರಲ್ಲಿ ಸಿದ್ಧಿ ಪಡೆದಿದ್ದಾರೆ. ಕೊಕ್ಕರ್ಣೆಯ ಶಿಕ್ಷಕ ತರಬೇತಿ ಸಂಸ್ಥೆಯಲ್ಲಿ ಶಿಕ್ಷಕರಾಗಿದ್ದ ಶ್ರೀಯುತರು ಅನೇಕ ವಿದ್ಯಾರ್ಥಿಗಳಿಗೆ ಗಮಕ ಪರೀಕ್ಷೆಗೆ ತರಬೇತಿಯನ್ನೂ ನೀಡಿದ್ದಾರೆ. ಮಂಗಳೂರು ಆಕಾಶವಾಣಿಯ 'ಬಿ' ಶ್ರೇಣಿಯ ಕಲಾವಿದರಾದ ಇವರು ಉಡುಪಿಯ ಯಕ್ಷಗಾನ ಕೇಂದ್ರದ ಗುರುಗಳಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಈ ಎಲ್ಲಾ ಬಹುಮುಖೀ ಕಲಾ ಸೇವೆಗಳನ್ನು ಗುರುತಿಸಿ ವರ್ಷದ ಯಕ್ಷದಕ್ಷ ಸಕ್ಕಟ್ಟು ಪ್ರಶಸ್ತಿಯನ್ನು ಗಣ್ಯರ ಉಪಸ್ಥಿತಿಯಲ್ಲಿ, ಪಾಂಡವಪುರದ ಶ್ರೀ ಮಹಾಕಾಳಿ ಚಕ್ರೇಶ್ವರೀ ಪೀಠದ ಪೂಜ್ಯ ಅವಧೂತಸಿಂಹ ಶ್ರೀ ಶ್ರೀ ವಿದ್ಯಾಹಂಸ ಭಾರತೀಯವರ ದಿವ್ಯ ಸಾನಿಧ್ಯದಲ್ಲಿ, ಪುತ್ತೂರು ಮಹಾಲಿಂಗೇಶ್ವರ ದೇವಸ್ಥಾನದ ಮಾಜಿ ಧರ್ಮದರ್ಶಿಗಳಾದ ಶ್ರೀ ಜಗನ್ನಿವಾಸರಾಯರ ಅಧ್ಯಕ್ಷತೆಯಲ್ಲಿ ಸೌಕೂರಿನ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ನಡೆದ ಸಮಾರಂಭದಲ್ಲಿ ನೀಡಿ ಗೌರವಿಸಲಾಯಿತು.

ಅಂದು ಬೆಳಿಗ್ಗೆ ಶ್ರೀ ದೇವಳದಲ್ಲಿ ದುರ್ಗಾಹೋಮ, ಶಾಲಾ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ, ಮಧ್ಯಾಹ್ನ ಭೋಜನದ ನಂತರ ಅತಿಥಿ ಕಲಾವಿದರ ಕೂಡುವಿಕೆಯಿಂದ 'ಕೃಷ್ಣಾರ್ಜುನ ಕಾಳಗ' ಯಕ್ಷಗಾನ ಪ್ರದರ್ಶನವೂ ನೆರವೇರಿತು. ಸಕ್ಕಟ್ಟು ಕುಟುಂಬಿಕರು, ಬಂಧುಗಳು, ಅಭಿಮಾನಿಗಳೂ ಬಹುಸಂಖ್ಯೆಯಲ್ಲಿ ನೆರೆದಿದ್ದರು.

# ಕಾಸರಗೋಡು ಯಕ್ಷಸಮುದ್ಯತ ಮಹಿಳಾ ತಂಡದಿಂದ ಯಕ್ಷಗಾನ ತಾಳ ಮದ್ದಳೆ



ಇತ್ತೀಚೆಗೆ ಪೆರ್ಲ ಶಂಕರ ಸದನದಲ್ಲಿ ನಡೆದ ಖ್ಯಾತ ವಿದ್ವಾಂಸರೂ, ಯಕ್ಷಗಾನ ಅರ್ಥಧಾರಿಗಳೂ ಆದ ದಿ| ಪಂಡಿತ ಪೆರ್ಲ ಕೃಷ್ಣ ಭಟ್ಟರ ಪ್ರಥಮ ಸಂಸ್ಮರಣ ಕಾರ್ಯಕ್ರಮದ ಅಂಗವಾಗಿ ಕಾಸರಗೋಡು ಯಕ್ಷ ಸಮುದ್ಯತ ಮಹಿಳಾ ತಂಡದವರಿಂದ 'ಮಾಗಧ ವಧೆ' ತಾಳ ಮದ್ದಳೆ ಕಾರ್ಯಕ್ರಮ ಜರುಗಿತು.

ಹಿಮ್ಮೇಳದಲ್ಲಿ ಭಾಗವತಿಕೆಯಲ್ಲಿ ಶ್ರೀಮತಿ ರತ್ನಾವತಿ ಭಟ್ ಪಡ್ರೆ, ಮದ್ದಳೆಯಲ್ಲಿ ಉದಯ ಕಂಬಾರ್, ಚೆಂಡೆಯಲ್ಲಿ ಕುದ್ರೆಕೂಡ್ ರಾಮಭಟ್ ಸಹಕರಿಸಿದರು. ಮುಮ್ಮೇಳದಲ್ಲಿ ಅರ್ಥಧಾರಿಗಳಾಗಿ ಕೃಷ್ಣ- ಶ್ರೀಮತಿ ವಾಣಿ, ಧರ್ಮರಾಯ-ಶೈಲಜಾ.ಬಿ, ಭೀಮ ಸೇನ-ಮಧುಮತಿ ಕಂಬಾರ್, ಅರ್ಜುನ-ಶೈಲಜಾ ನೀಲಂಗಳ, ಕೃಷ್ಣ ಬ್ರಾಹ್ಮಣ-ಕುಮಾರಿ ಸೌಮ್ಯ ಭಟ್ ಕುಂಠಿಕಾನ ಮಠ, ಮಾಗಧ-ಶ್ರೀಮತಿ ಜಯಶ್ರೀ ಶ್ರೀಕೃಷ್ಣಯ್ಯ ಅನಂತಪುರ ಸಹಕರಿಸಿದರು. ಬಲಿಪ ನಾರಾಯಣ ಭಾಗವತರು, ಕುಂಬಳೆ ಸುಂದರ ರಾವ್, ಎಂ.ಪ್ರಭಾಕರ ಜೋಶಿ, ಕೋಟೆ ರಾಮಭಟ್, ಮಾಧವ ಪೆರ್ಲ, ವಿ.ಮ. ಅಡ್ಯನಡ್ಕ, ಶ್ರೀ ಶ್ರೀಕೃಷ್ಣಯ್ಯ ಅನಂತಪುರ ಮೊದಲಾದವರು ಉಪಸ್ಥಿತರಿದ್ದರು.

## ವೃಶ್ಚಿಕ ಮಾಸದ ವಿಶೇಷ ದಿನಗಳು

| | |
|---|---|
| 16-11-2014 | ವೃಶ್ಚಿಕ ಸಂಕ್ರಮಣ, |
| 18-11-2014 | ಸರ್ವೈಕಾದಶೀ |
| 19-11-2014 | ಪ್ರದೋಷಃ, ಅನುರಾಧಾ ನಕ್ಷತ್ರಾರಂಭ |
| 22-11-2014 | ಅಮವಾಸ್ಯಾ, |
| 27-11-2014 | ಸುಬ್ರಹ್ಮಣ್ಯ ಷಷ್ಠೀ |
| 02-12-2014 | ಸರ್ವೈಕಾದಶೀ, ಜೇಷ್ಠಾ ನಕ್ಷತ್ರಾರಂಭ |
| 04-12-2014 | ಪ್ರದೋಷಃ |
| 06-12-2014 | ಪೂರ್ಣಿಮಾ, |
| 10-12-2014 | ಸಂಕಷ್ಟ ಚತುರ್ಥಿ ಚಂದ್ರೋದಯ ರಾತ್ರಿ-9.31ಕ್ಕೆ |
| 16-12-2014 | ಧನು ಸಂಕ್ರಮಣ |

## ಗೃಹ ಪ್ರವೇಶ

ಕಾಪು ಕರಂದಾಡಿಯ ಶ್ರೀ ಅನಂತ ಕೃಷ್ಣರಾವ್ (ಕರಂದಾಡಿ ದಿ ಶ್ರೀನಿವಾಸ ರಾಯರ ಪುತ್ರ) ಹಾಗೂ ಶ್ರೀಮತಿ ಪದ್ಮ ದಂಪತಿಗಳು ಬೆಂಗಳೂರಿನ ಸಹಕಾರ ನಗರದಲ್ಲಿ ನಿರ್ಮಿಸಿದ ನೂತನ ಗೃಹದ ಪ್ರವೇಶೋತ್ಸವವನ್ನು ದಿನಾಂಕ 05-11-2014ರಂದು ಬಂಧು ಬಾಂಧವರೊಡಗೂಡಿ ನೆರವೇರಿಸಿದರು.

## ವಿದೇಶ ಪ್ರಯಾಣ

ಬೆಂಗಳೂರು Infosysನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ತಿಕ್ ರಾವ್ ಬಪ್ಪನಾಡು ತನ್ನ ಪತ್ನಿ ಹಾಗೂ ಪುತ್ರನೊಂದಿಗೆ ಆಸ್ಟ್ರೇಲಿಯಾದ ಸಿಡ್ನಿಗೆ ಕಾರ್ಯನಿಮಿತ್ತ ತೆರಳುತ್ತಾರೆ ಅವರಿಗೆ ಶ್ರೀ ಶಾರದಾ ಅಭಿನಂದನೆಗಳು.

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.10-12-2014) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.27-11-2014 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.25-11-2014 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

# "ಬಣ್ಣ ಬಣ್ಣದ ಸಂಜೆ ಮಲ್ಲಿಗೆ" ಕೃತಿ ಬಿಡುಗಡೆ ಸಮಾರಂಭ




ಏಕಾಂಗಿಯಾಗಿದ್ದಾಗ ಹೊರಗಿನ ಕಣ್ಣು ಮುಚ್ಚಿ ಒಳಗಣ್ಣು ತೆರೆದಿಟ್ಟು ಪಡೆವ ಅನುಭವದಿಂದ ಸಾಹಿತ್ಯ ಸೃಷ್ಟಿ ಸಾಧ್ಯ ಎಂದು ಅಂಬಲಪಾಡಿ ಶ್ರೀ ಜನಾರ್ದನ ಮತ್ತು ಮಹಾಕಾಳಿ ದೇವಸ್ಥಾನದ ಧರ್ಮದರ್ಶಿ ಡಾ.ನಿ.ಬೀ. ವಿಜಯ ಬಲ್ಲಾಳ್ ಹೇಳಿದ್ದಾರೆ.

ಅಂಬಲಪಾಡಿ ದೇವಸ್ಥಾನದ ಶ್ರೀ ಭವಾನಿ ಮಂಟಪದಲ್ಲಿ ವೈ.ಮೋಹನ್ ರಾವ್ ರಚಿತ ಚುಟುಕ ಸಂಕಲನ 'ಬಣ್ಣ ಬಣ್ಣದ ಸಂಜೆ ಮಲ್ಲಿಗೆ' ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡಿದರು.

ರಂಗ ನಿರ್ದೇಶಕ ಪ್ರೊ| ಉದ್ಯಾವರ ಮಾಧವ ಆಚಾರ್ಯ ಅವರು ಮಾತನಾಡಿ, ಸಾಹಿತ್ಯಾಸಕ್ತರ ಕೊರತೆ ಒಳ್ಳೆಯ ಓದಿಗೆ ಜನರನ್ನು 'ಹುಡುಕುವ ಪರಿಸ್ಥಿತಿ'ಯಿದೆ. ಕಳೆದು ಹೋದ ಓದಿನ ಹವ್ಯಾಸ ಮರುಹುಟ್ಟು ಪಡೆಯಬೇಕು. ಸಾಹಿತ್ಯಯುಕ್ತ ವಿಮರ್ಶಕರ ಕೊರತೆಯಿದ್ದು ನೈಜ ಸಾಹಿತ್ಯಾಧ್ಯಯನಕ್ಕೆ ಬೇಕಾದ ಪತ್ರಿಕೆಗಳೂ ಬರುತ್ತಿಲ್ಲ ಎಂದು ಹೇಳಿದರು.

ಸುಹಾಸಂ ಸ್ಥಾಪಕ ಅಧ್ಯಕ್ಷ ಕೆ.ವಿ.ಶ್ರೀನಿವಾಸ ರಾವ್ ಅಧ್ಯಕ್ಷತೆ ವಹಿಸಿದ್ದರು. ಸಾಹಿತ್ಯ ಸಂಘಟಕ ನಂದಳಿಕೆ ಬಾಲಚಂದ್ರ ರಾವ್, ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಟ್ರಸ್ಟಿ ಬಿ. ಜಯರಾಮ ರಾವ್ ಶುಭ ಹಾರೈಸಿದರು. ಕೃತಿಕಾರ ವೈ. ಮೋಹನ್ ರಾವ್ ಸ್ವಾಗತಿಸಿದರು. ಕು| ದಿಶಾ ಪ್ರಾರ್ಥಿಸಿದರು. ರಾಮ ಭಟ್. ಎಸ್ ಕಾರ್ಯಕ್ರಮ ನಿರೂಪಿಸಿದರು.

## ಶೃಂಗೇರಿ ಜಗದ್ಗುರುಗಳ ಸನ್ಯಾಸ ಸ್ವೀಕಾರದ 40ನೇ ವರ್ಷ

ದಕ್ಷಿಣಾಮ್ನಾಯ ಶ್ರೀಕ್ಷೇತ್ರ ಶೃಂಗೇರಿಯ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸನ್ನಿಧಾನಂಗಳವರ ಸನ್ಯಾಸ ಸ್ವೀಕಾರದ 40ನೇ ವರ್ಷಾಚರಣೆಯು ಇತ್ತೀಚೆಗೆ ಶೃಂಗೇರಿಯಲ್ಲಿ ನೆರವೇರಿತು. ಶ್ರೀ ಶ್ರೀಗಳು ಶೃಂಗೇರಿಯ 36ನೇ ಯತಿಗಳಾಗಿ 1974ರ ನವಂಬರ್ 11ರಂದು ಶ್ರೀ ಶ್ರೀ ಅಭಿನವ ವಿದ್ಯಾತೀರ್ಥರಿಂದ ಸನ್ಯಾಸಾಶ್ರಮ ಸ್ವೀಕರಿಸಿದ್ದರು. ಶ್ರೀ ಶ್ರೀಗಳ ಮಾರ್ಗದರ್ಶನ ಹಾಗೂ ಆಶೀರ್ವಾದವು ಇನ್ನಷ್ಟು ದೀರ್ಘಕಾಲ ನಮಗೆ ಲಭಿಸುವಂತಾಗಲಿ ಎಂದು ಶ್ರೀಶಾರದಾ ಹಾರೈಕೆ.




ಎಮ್. ದೇವಾನಂದ್ ಭಟ್

Cell : 9845644556
9483913344

ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೋ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

ಶ್ರೀ ಕ್ಷೇತ್ರ ಉದಯಾದ್ರಿ

**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ**

**ಪಡುಬಿದ್ರಿ, ಉಡುಪಿ ಜಿಲ್ಲೆ–574111**

ಭಕ್ತಾಭಿಮಾನಿಗಳೇ,

**ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶ್ರೀ ಶಾರದಾ ಪೀಠಾಧೀಶ್ವರರಾದ ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರ ಪರಮಾನುಗ್ರಹದಿಂದ**

ಸ್ವಸ್ತಿ! ಶ್ರೀ ಜಯ ನಾಮ ಸಂವತ್ಸರದ ಧನುಮಾಸ ದಿನ ೫ ಸಲುವ

**ಮಾರ್ಗಶಿರ ಅಮಾವಾಸ್ಯೆ ದಿನಾಂಕ 21–12–2014ರ ಆದಿತ್ಯವಾರದಂದು**

**ವರ್ಷಾವಧಿ ಉತ್ಸವ**

**ಎಳ್ಳಮಾವಾಸ್ಯೆ ಜಾತ್ರೆ**ಯು ಜರಗಲಿರುವುದು.

ಈ ದೇವತಾ ಕಾರ್ಯಕ್ರಮದಲ್ಲಿ ಭಕ್ತಾದಿಗಳಾದ ತಾವೆಲ್ಲರೂ ಭಾಗವಹಿಸಿ, ತನು–ಮನ–ಧನಗಳಿಂದ ಸಹಕರಿಸಿ, ಗಂಧಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

**–ಪ್ರಧಾನ ಅರ್ಚಕರು, ಅಧ್ಯಕ್ಷರು, ಊರ ಹತ್ತು ಸಮಸ್ತರು**

**ಕಾರ್ಯಕ್ರಮಗಳು**

ದಿನಾಂಕ 06–12–2014 ನೇ ದಿನಾಂಕ 20–12–2014ರ ತನಕ ರಾತ್ರಿ 7.30ಕ್ಕೆ ಶ್ರೀ ಬಾಲಗಣಪತಿ ದೇವರಿಗೆ ರಂಗಪೂಜೆ, ದಿನಾಂಕ 21–12–2014ರಂದು ಪ್ರಾತಃಕಾಲ ಗಂಟೆ 8.00ಕ್ಕೆ ದೇವರಿಗೆ ನಿತ್ಯಪೂಜೆ, ಪಂಚಮಿಂಶತಿ ಕಲಶ ಪ್ರತಿಷ್ಠೆ, ಅಧಿವಾಸ ಹೋಮ, ಕಲಶಾಭಿಷೇಕ, **ಶ್ರೀ ಗಣಪತಿ ಅಥರ್ವಶೀರ್ಷ ಸಹಸ್ರಮೋದಕ ಯಾಗ,** ಮಧ್ಯಾಹ್ನ ಗಂಟೆ 12.00ಕ್ಕೆ ಯಾಗದ ಪೂರ್ಣಾಹುತಿ, **ಮಹಾಪೂಜೆ,** ಮಧ್ಯಾಹ್ನ ಗಂಟೆ 1.00 ರಿಂದ 2.30 ರವರೆಗೆ **ಸಾರ್ವಜನಿಕ ಅನ್ನಸಂತರ್ಪಣೆ,** ರಾತ್ರಿ 7.00ರಿಂದ ಶ್ರೀ ಬಾಲಗಣಪತಿ ದೇವರಿಗೆ ಮಹಾರಂಗಪೂಜೆ ಉತ್ಸವ ಬಲಿ, ಕಟ್ಟೆಪೂಜೆ, ಪ್ರಸಾದ ವಿತರಣೆ, ಮಂತ್ರಾಕ್ಷತೆ.


ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

# ಕೋಟೇಶ್ವರದಲ್ಲಿ ನೂತನ ಶಾಖೆಯ ಆರಂಭ



"ವೇಗವಾಗಿ ಬೆಳೆಯುತ್ತಿರುವ ಕೋಟೇಶ್ವರ ಪಟ್ಟಣದಲ್ಲಿ ಈಗಾಗಲೇ ಸಹಕಾರಿ ರಂಗದಲ್ಲಿ ದಕ್ಷತೆ ಪ್ರಾಮಾಣಿಕತೆ, ಆರ್ಥಿಕತೆಯಿಂದ ಜನರ ಹೃದಯ ತಟ್ಟಿರುವ ಶ್ರೀ ಶಾರದಾ ಕ್ರೆಡಿಟ್–ಕೋ ಅಪರೇಟಿವ್ ಸೊಸ್ಯಾಟಿ ತನ್ನ ಶಾಖೆಯನ್ನು ಈ ಭಾಗದಲ್ಲಿ ತೆರೆದಿರುವುದು ಶ್ಲಾಘನೀಯ ಈ ಪರಿಸರದ ಜನತೆಗೆ ಈ ನೂತನ ಶಾಖೆಯಿಂದ ಹೆಚ್ಚಿನ ಸಾಲ, ಸೌಲಭ್ಯಗಳು ದೊರಕುವಂತಾಗಲಿ, ಸಹಕಾರ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಲಿ, ಶಾಖೆಯು ಶೀಘ್ರ ಅಭಿವೃದ್ಧಿಯಾಗಲಿ" ಎಂದು ಶ್ರೀ ಕ್ಷೇತ್ರ ಆನೆಗುಡ್ಡೆ ದೇವಸ್ಥಾನದ ಧರ್ಮದರ್ಶಿ ಶ್ರೀ ಸೂರ್ಯನಾರಾಯಣ ಉಪಾಧ್ಯಾಯರು ಹೇಳಿದ್ದಾರೆ.

ಅವರು ಕೋಟೇಶ್ವರ ಮುಖ್ಯ ರಸ್ತೆಯಲ್ಲಿನ ಶ್ರೀರಾಮ ಸಂಕೀರ್ಣದ ಪ್ರಥಮ ಮಹಡಿಯಲ್ಲಿ ಶ್ರೀ ಶಾರದಾ ಕ್ರೆಡಿಟ್ ಕೋ– ಅಪರೇಟಿವ್ ಸೊಸ್ಯಾಟಿಯ ಕೋಟೇಶ್ವರ ಶಾಖೆಯನ್ನು ಉದ್ಘಾಟಿಸಿದ ಬಳಿಕ ಸಭಾ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಸಹಕಾರಿ ರಂಗದ ಬ್ಯಾಂಕುಗಳು ಕೂಡಾ ಸರಕಾರಿ ರಂಗದ ಬ್ಯಾಂಕುಗಳಂತೆ ಗ್ರಾಹಕರನ್ನು ಬಹುಬೇಗನೇ ತಲುಪುತ್ತಿವೆ ಎಂದು ಉಪಾಧ್ಯಾಯರು ಈ ಸಂದರ್ಭದಲ್ಲಿ ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ – ಹಾಲು ಉತ್ಪಾದಕರ ಸಂಘ ಶಂಕರ ನಾರಾಯಣ ಇದರ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ದಯಾನಂದ ರಾವ್– "ಅವಿಭಜಿತ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯು ಬ್ಯಾಂಕಿಂಗ್ ಕ್ಷೇತ್ರ ಮತ್ತು ವಿದ್ಯಾಕ್ಷೇತ್ರಗಳ ತವರೂರಾಗಿದೆ. ಸಹಕಾರಿ ಕ್ಷೇತ್ರಕ್ಕೆ ಈ ಜಿಲ್ಲೆಯ ಹಿರಿಯ ಸಹಕಾರಿ ಧುರೀಣರು ನೀಡಿರುವ ಕೊಡುಗೆ ಅನನ್ಯವಾದುದು. ಒಟ್ಟಾರೆ ಬ್ಯಾಂಕಿಗ್ ಕ್ಷೇತ್ರದಲ್ಲಾದ ಒಟ್ಟು ಬದಲಾವಣೆಗಳು ಕರ್ನಾಟಕದ ಮೂಲೆ–ಮೂಲೆಯಲ್ಲಿಯೂ ಆಗಿವೆ. ಅದರಲ್ಲೂ ಉಡುಪಿ ಜಿಲ್ಲೆಯು ಬೆಳವಣಿಗೆಯ ದೃಷ್ಟಿಯಿಂದ ಸವ್ಯಸಾಚಿ ಎನಿಸಿಕೊಂಡಿದೆ. ಶ್ರೀ ಶಾರದಾ ಕ್ರೆಡಿಟ್ ಕೋ ಅಪರೇಟಿವ್ ಸೊಸ್ಯಾಟಿಯು ಉತ್ತಮ ಗ್ರಾಹಕ ಸೇವೆಯೊಂದಿಗೆ, ಯಶಸ್ವಿಯಾಗಿ ಬೆಳೆಯಲಿ" ಎಂದು ಹಾರೈಸಿದರು.

ಸಭೆಯನ್ನು ಉದ್ದೇಶಿಸಿ ಕುಂದಾಪುರ ತಾಲೂಕು ದ್ರಾವಿಡ ಬ್ರಾಹ್ಮಣ ಪರಿಷತ್‌ನ ಗೌರವಾಧ್ಯಕ್ಷರಾಗಿರುವ ಶ್ರೀನಿವಾಸ್ ಹೆಬ್ಬಾರ್, ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘವು ಅಧ್ಯಕ್ಷರಾಗಿರುವ ಗೋಪಾಲಕೃಷ್ಣ ಹೆಬ್ಬಾರ್, ಕೋಟೇಶ್ವರ ಗ್ರಾಮ ಪಂಚಾಯತ್ ಅಧ್ಯಕ್ಷರಾಗಿರುವ ರಾಜಶೇಖರ್ ಶೆಟ್ಟಿ, ಓಂ ಟೈಲ್ಸ್ ಕುಂದಾಪುರ ಇದರ ಉದ್ಯಮಿ ಸಚಿನ್ ನಕತ್ತಾಯ, ಬೀಜಾಡಿ ಗ್ರಾಮ ಪಂಚಾಯತ್ ಸದಸ್ಯರಾಗಿರುವ ರವೀಂದ್ರ ದೊಡ್ಮನೆ, ಮತ್ತು ಕಟ್ಟಡ ಮಾಲಕರಾಗಿರುವ ಗೋವಿಂದರಾಯ, ಸಂಜೀವ ಕಾಮತ್–ಮಾತನಾಡಿ ಶುಭ ಹಾರೈಸಿದರು.

ವೇದಿಕೆಯಲ್ಲಿ ಸೊಸ್ಯಾಟಿಯ ಅಧ್ಯಕ್ಷರಾಗಿರುವ ಎಂ. ಸದಾನಂದ ರಾವ್, ಕಾರ್ಯದರ್ಶಿ ಪಟ್ಟಾಭಿರಾಮ ಎನ್. ಎಸ್, ಮತ್ತು ಶಾಖಾ ವ್ಯವಸ್ಥಾಪಕ ಕೆ. ವಿಶ್ವನಾಥ ರಾವ್ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಸೊಸ್ಯಾಟಿಯ ನೂತನ ಕೋಟೇಶ್ವರ ಶಾಖೆಯಲ್ಲಿ ಉಳಿತಾಯ ಶಾಖೆಗಳನ್ನು ತೆರೆದ ಹಾಗೂ ನಿರಖು ಠೇವಣಿಯಿರಿಸಿದ ಗ್ರಾಹಕರನ್ನು ಗುರುತಿಸಿ ಗೌರವಿಸಲಾಯಿತು.

ಪ್ರಾರಂಭದಲ್ಲಿ ಶ್ರೀ ಶಾರದಾ ಕ್ರೆಡಿಟ್ ಕೋ–ಅಪರೇಟಿವ್ ಸೊಸ್ಯಾಟಿಯ ಅಧ್ಯಕ್ಷರಾದ ಎಂ ಸದಾನಂದ ರಾವ್ ಸ್ವಾಗತಿದರು. ಶಾಂತಲಾ ಮತ್ತು ನಿಖಿತಾ ಪ್ರಾರ್ಥನೆಯನ್ನು ನಡೆಸಿಕೊಟ್ಟರು. ಗಣೇಶ್‌ರಾವ್ ಮತ್ತು ಶ್ರೀಮತಿ ಶಾಂತಾ ಗಣೇಶ್ ರಾವ್ ಕಾರ್ಯಕ್ರಮ ನಿರ್ವಹಿಸಿದರು. ಶಾಖಾವ್ಯವಸ್ಥಾಪಕ ಕೆ. ವಿಶ್ವನಾಥ್ ರಾವ್ ವಂದಿಸಿದರು.


**ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ**

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು
ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

| | |
|---|---|
| **#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560010** | **ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ** |

**ಮೊಬೈಲ್– 9886629697, 9986119865**

**ಶ್ರೀ ಮಾತಾ ಜ್ಯೋತಿಷ್ಯಾಲಯ**

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

**ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)**

**ಪ್ರೊ : ಸುಧಾಕರ್ ರಾವ್ ಬೆಳ್ಳೆ**



ಶ್ರೀಮಾತಾ ಇಲೆಕ್ಟ್ರಾನಿಕ್ಸ್

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....

**ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258–274103**
**ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820–2599093**



ತಂತ್ರಾಡಿ ವಿಶ್ವನಾಥ ಶಾನುಭೋಗ್

☎ 94487 24161
97417 85551

ಹರಿಕೃಷ್ಣ ಡಿಜಿಟಲ್ಸ್

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576 102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



**RAJESH POWER PRESS**

**PRINTERS & PUBLISHERS**

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

**QUALITY FIRST AND ALWAYS**

*Krishna Rao*

Ph : 2520652
Mob. : 9902029048

**KISHAN**



**Studio & Video**



**Indoor Photography & Port Folio Photography, Video & Mixing, Lamination**

MAIN ROAD, MAJOOR & BANTAKAL.



Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org